Contributed by smt.Vidhya Vishnu Kiran www.vijayadasaru.net Team member
Bangalore

# ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ಕೃತಂ
# ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯಮ್
॥ ಹರಿಃ ಓಂ ॥

ನಾರಾಯಣಾಯ ಪರಿಪೂರ್ಣ ಗುಣಾರ್ಣ ವಾಯ
ವಿಶ್ವೋದಯಸ್ಥಿತಿಲಯೋನ್ನಿ ಯತಿಪ್ರದಾಯ।
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ–
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥೧॥

ಶ್ರೀಮನ್ನಾ ರಾಯಣನು ಪರಿಪೂರ್ಣ ವಾದ ಗುಣಗಳಿಂದ ಸಮುದ್ರದಂತಿರುವವನು. ಜಗತ್ತಿಗೆ ಉತ್ಪತ್ತಿ, ಸ್ಥಿತಿ. ನಾಶ, ಉತ್ಕೃಷ್ಟವಾದ ಪ್ರೇರಣೆ ಇವುಗಳನ್ನು ಕೊಡುವವನು. ಅವರವರ ಯೋಗ್ಯತೆಗೆ ಅನುಗುಣವಾಗಿ ಜ್ಞಾನವನ್ನು ನೀಡುವವನು. ದೇವತೆಗಳ ಸುಖಕ್ಕೂ, ಅಸುರರ ದುಃಖಕ್ಕೂ, ಮಧ್ಯಮಜೀವರ ಸುಃಖ–ದುಃಖಗಳೆರಡಕ್ಕೂ ಈತನೇ ಉತ್ತಮಕಾರಣನು. ಎಲ್ಲೆಡೆಯಲ್ಲೂ ವ್ಯಾಪ್ತನು. ಇಂತಹ ಮಹಿಮೆಗಳುಳ್ಳ ಶ್ರೀಮನ್ನಾ ರಯಣಾ! ನಿನಗೆ ನಮಸ್ಕಾರ, ನಮಸ್ಕಾರ! ಅನಂತ ನಮಸ್ಕಾರ!

ಆಸೀದುದಾರಗುಣವಾರಿಧಿರಪ್ರಮೇಯೋ
ನಾರಾಯಣಃ ಪರತಮಃ ಪರಮಾತ್ಮ ಏಕಃ ।
ಸಂಶಾಂತಸಂವಿದಖಿಲಂ ಜಠರೇ ನಿಧಾಯ
ಲಕ್ಷ್ಮೀ ಭುಜಾಂತರಗತಃ ಸ್ವರತೋಽಪಿ ಚಾಗ್ರೇ ॥೨॥

ಈತನು ಉತ್ಕೃಷ್ಟವಾದ ಗುಣಗಳಿಂದ ಸಮುದ್ರದಂತಿರುವವನು. ಅನಂತಾನಂತ ಗುಣಗಳಿರುವ ಪ್ರಯುಕ್ತ ಸಂಪೂರ್ಣ ವಾಗಿ ತಿಳಿಯಲು ಅಶಕ್ಯನು. ಬ್ರಹ್ಮಾದಿಗಳಿಗಿಂತ ಉತ್ತಮಳಾದ ಲಕ್ಷ್ಮೀದೇವಿಗಿಂತಲೂ ಅತ್ಯುತ್ತಮನಿವನು.ಸೃಷ್ಟಿಗಿಂತ ಮೊದಲು ಪ್ರಳಯಕಾಲದಲ್ಲಿ ಎಲ್ಲ ಜ್ಞಾನವನ್ನೂ ಹೃದಯದಲ್ಲಿ ಅಡಗಿಸಿಕೊಂಡು ಹೊಟ್ಟೆಯಲ್ಲಿ ಎಲ್ಲ ಜಗತ್ತನ್ನೂ ಇಟ್ಟುಕೊಂಡಿರುವ ಇವನನ್ನು ಲಕ್ಷ್ಮೀದೇವಿಯು ಆಲಂಗಿಸುತ್ತಿರುವಳು. (ಸ್ವರಮಣನಾದರೂ ಇವನು ಲಕ್ಷ್ಮಿಗೆ ಆನಂದವನ್ನು ನೀಡಲಿಕ್ಕಾಗಿಯೇ ಅವಳಿಂದ ಆಲಂಗಿತನಾಗಿರುವನು.)

ತಸ್ಯೋದರಸ್ಥ ಜಗತಃ ಸದಮಂದಸಾಂದ್ರ–

ಸ್ವಾನಂದತುಷ್ಟವಪುಷೋಪಿ ರಮಾರಮಸ್ಯ
ಭೂತ್ಯೈ ನಿಜಾಶ್ರಿತಜನಸ್ಯ ಹಿ ಸೃಜ್ಯಸೃಷ್ಟ್ಯಾ-
ವೀಕ್ಷಾ ಬಭೂವ ಪರನಾಮ ನಿಮೇಷಕಾಂತೇ ॥೩॥

ಇವನ ಹೊಟ್ಟೆಯಲ್ಲಿ ಸಕಲ ಜಗತ್ತೂ ಅಡಗಿರುತ್ತದೆ. ಈತನಲ್ಲಿ ಯಾವ ದೋಷವೂ ಇಲ್ಲ. ಪೂರ್ಣವೂ, ನಿಬಿಡವೂ ಆಗಿರುವ ಸ್ವರೂಪಭೂತವಾದ ಆನಂದದಿಂದ ತುಷ್ಟವಾದ (ತೃಪ್ತವಾದ, ಅಲಂಬುದ್ಧಿ ಯುಕ್ತವಾದ ) ಶರೀರವುಳ್ಳವನಾಗಿರುವನು. ಹಾಗಿದ್ದರೂ ಕೂಡ ಇವನಿಗೆ ಸೃಷ್ಟಿ ಹೊಂದಲು ಅರ್ಹವಾದ ವಸ್ತುಗಳನ್ನು ಸೃಷ್ಟಿ ಮಾಡುವ ಇಚ್ಛೆ ಉಂಟಾಯಿತು. ರಮಾರಮಣನಾದ ಇವನು ತನ್ನನ್ನು ಆಶ್ರಯಿಸಿರುವ ರಮಾ ಬ್ರಹ್ಮಾದಿಗಳಿಗೆ ಐಶ್ವರ್ಯ ನೀಡಲಿಕ್ಕಾಗಿಯೇ ಪ್ರಳಯಕಾಲದ ಅಂತ್ಯದಲ್ಲಿ ಸೃಷ್ಟಿ ಮಾಡಲು ಅವನು ಇಚ್ಛಿಸಿದ್ದು. ಆ ಪ್ರಳಯ ಕಾಲ ಭಗವಂತನು ಸ್ವಲ್ಪ ಕಣ್ಣು ಮುಚ್ಚಿ ತೆಗೆಯುವಷ್ಟೆ ಕಾಲವಂತೆ.

ದೃಷ್ಟ್ವಾ ಸ ಚೇತನಗಣಾನ್ ಜಠರೇ ಶಯಾನಾ_
ನಾನಂದಮಾತ್ರವಪುಷಃ ಸೃತಿವಿಪ್ರಮುಕ್ತಾನ್ ।
ಧ್ಯಾನಂ ಗತಾನ್ ಸೃತಿಗತಾಂಶ್ಚ ಸುಷುಪ್ತಿ ಸಂಸ್ಥಾನ್
ಬ್ರಹ್ಮಾದಿಕಾನ್ ಕಲಿಪರಾನ್ಮನುಜಾಂಸ್ತಥೈಕ್ಷತ್ ॥೪॥

ಆ ನಾರಾಯಣನ ಹೊಟ್ಟೆಯಲ್ಲಿ ಮುಕ್ತರು, ಸಂಸಾರಿಗಳೆಂಬ ಎರಡು ವಿಧ ಜೀವಸಮುದಾಯವು ಅಡಗಿದೆ. ಇದನ್ನು ಭಗವಂತನು ನೋಡಿದ. ನಂತರ ಸ್ವರೂಪಭೂತವಾದ ಆನಂದವೇ ಶರೀರವಾಗಿ ಉಳ್ಳ ಮುಕ್ತರು ತನ್ನ ಧ್ಯಾನವನ್ನು ಮಾಡುತ್ತಿರುವುದನ್ನೂ ನೋಡಿದನು. ಹಾಗೆಯೇ ಸಂಸಾರದಲ್ಲಿರುವ ಹಾಗೂ ಸುಷುಪ್ತಿಯ ಅವಸ್ಥೆಯನ್ನು ಹೊಂದಿರುವ ರುದ್ರಾದಿ ಉತ್ತಮಜೀವರನ್ನೂ, ಕಲಿಪರ್ಯಂತವಾದ ಅಧಮಜೀವರನ್ನೂ ನೋಡಿದನು.

ಸ್ರಕ್ಷ್ಯೇ ಹಿ ಚೇತನ ಗಣಾನ್ ಸುಖದುಃಖಮಧ್ಯ
ಸಂಪ್ರಾಪ್ತಯೇ ತನುಭೃತಾಂ ವಿಹೃತಿಂ ಮಮೇಚ್ಛನ್
ಸೋ ಯಂ ವಿಹಾರ ಇಹ ಮೇ ತನುಭೃತ್ಸ್ವಭಾವ
ಸಂಭೂತಯೇ ಭವತಿ ಭೂತಿಕೃದೇವ ಭೂತ್ಯಾಃ ॥೫॥

(ಭಗವಂತನು ಸಂಕಲ್ಪ ಮಾಡುತ್ತಿದ್ದಾನೆ.) ನಾನು ಈ ಚೇತನಸಮುದಾಯವನ್ನು ಸೃಷ್ಟಿ ಮಾಡುತ್ತೇನೆ. ಉತ್ತಮರಿಗೆ ಸುಖ, ಅಧಮರಿಗೆ ದುಃಖ ಹಾಗೂ ಮಧ್ಯಮರಿಗೆ ಸುಖದುಃಖ, ಇವುಗಳ ಪ್ರಾಪ್ತಿಗಾಗಿಯೂ ನನ್ನ ವಿಹಾರವನ್ನು ಇಚ್ಛಿಸುವವನಾಗಿ ಈ

ಸೃಷ್ಟಿ ಮಾಡುತ್ತೇನೆ. ಈ ನನ್ನ ವಿಹಾರವು ಜೀವರಿಗೆ ಮೂರೂ ವಿಧವಾದ ಸ್ವಭಾವವು ಅನುಭವಕ್ಕೆ ಬರಲಿಕ್ಕಾಗಿ ಕಾರಣವಾಗುತ್ತದೆ. ಮಾತ್ರವಲ್ಲದೆ ಜಡಪ್ರಕೃತಿಗೂ, ಅದರ ನಿಯಾಮಕಳಾದ ಲಕ್ಷ್ಮಿಗೂ ಬಹುರೂಪಗಳನ್ನು ಹೊಂದಲಿಕ್ಕೂ ಕಾರಣವಾಗುತ್ತದೆ.

ಇತ್ಥಂ ವಿಚಿಂತ್ಯ ಪರಮಃ ಸ ತು ವಾಸುದೇವ
ನಾಮಾ ಬಭೂವ ನಿಜಮುಕ್ತಿಪದಪ್ರದಾತಾ ।
ತಸ್ಯಾಜ್ಞ ಯೈವ ನಿಯತಾ ಥ ರಮಾಪಿ ರೂಪಂ
ಬಭ್ರೇ ದ್ವಿತೀಯಮಪಿ ಯತ್ಪ್ರವದಂತಿ ಮಾಯಾಮ್ ॥೬॥

ಈ ರೀತಿಯಾಗಿ ಭಗವಂತನು ಆಲೋಚಿಸಿ ವಾಸುದೇವ ಎಂಬ ರೂಪವನ್ನು ತಾಳಿದನು. ಈ ರೂಪವೇ ಆತನ ಭಕ್ತರಿಗೆ ಮುಕ್ತಿಸ್ಥಾನವನ್ನು ನೀಡುವುದು. ಆ ನಾರಾಯಣನ ಅಪ್ಪಣೆಯಿಂದಲೇ ನಿಯಮಿಸಲ್ಪಟ್ಟ ಲಕ್ಷ್ಮೀದೇವಿಯೂ "ಮಾಯಾ" ಎಂಬ ರೂಪವನ್ನು ತಾಳಿದಳು.

ಸಂಕರ್ಷಣಃ ಸ ಚ ಬಭೂವ ಪುನಃ ಸುನಿತ್ಯಃ
ಸಂಹಾರಕಾರಣವಪುಸ್ತದನುಜ್ಞ ಯೈವ ।
ದೇವೀ ಜಯೇತ್ಯನುಬಭೂವ ಸ ಸೃಷ್ಟಿ ಹೇತೋಃ
ಪ್ರದ್ಯುಮ್ನ ತಾಮುಪಗತಃ ಕೃತಿತಾಂ ಚ ದೇವೀ ॥೭॥

ನಂತರ ನಿತ್ಯನಾದ ಆ ಪರಮಾತ್ಮನು ಪುನಃ ಸಂಕರ್ಷಣ ಎಂಬ ರೂಪವನ್ನು ತಾಳಿದನು. ಈ ರೂಪವೇ ಜಗತ್ತಿನ ಸಂಹಾರಕ್ಕೆ ಕಾರಣೀಭೂತವಾದದ್ದು . ಆ ಲಕ್ಷ್ಮೀಯಾದರೋ "ಜಯಾ" ಎಂಬ ರೂಪವನ್ನು ತಾಳಿದಳು. ನಂತರ ಆ ನಾರಾಯಣನು ಜಗತ್ತಿನ ಸೃಷ್ಟಿಗಾಗಿ ಪ್ರದ್ಯುಮ್ನ ಎಂಬ ರೂಪವನ್ನು ಹೊಂದಿದನು. ಅದನ್ನನುಸರಿಸಿ ಲಕ್ಷ್ಮೀದೇವಿಯು "ಕೃತಿ" ಎಂಬ ರೂಪವನ್ನು ತಾಳಿದಳು.

ಸ್ಥಿತ್ಯೈ ಪುನಃ ಸ ಭಗವಾನನಿರುದ್ಧ ನಾಮಾ
ದೇವೀ ಚ ಶಾಂತಿರ ಭವಚ್ಛರದಾಂ ಸಹಸ್ರಮ್ ।
ಸ್ಥಿತ್ವಾ ಸ್ವಮೂರ್ತಿಭಿರಮೂಭಿರಚಿಂತ್ಯಶಕ್ತಿಃ
ಪ್ರದ್ಯುಮ್ನ ರೂಪಕ ಇಮಾಂಶ್ಚರಮಾತ್ಮನೇದಾತ್ ॥೮॥

ನಂತರ ಭಗವಂತನು ಜಗತ್ತಿನ ಸ್ಥಿತಿಗಾಗಿ ಅನಿರುದ್ಧ ಎಂಬ ರೂಪವನ್ನು ಧರಿಸಿದನು. ಆಗ ಲಕ್ಷ್ಮೀದೇವಿಯು "ಶಾಂತಿ" ಎಂಬ ರೂಪವನ್ನು ಧರಿಸಿದಳು.ಈ ರೀತಿಯಾಗಿ ನಾರಾಯಣನೂ, ಲಕ್ಷ್ಮೀದೇವಿಯೂ ನಾಲ್ಕು ನಾಲ್ಕು ರೂಪಗಳನ್ನು ತಾಳಿ ಒಂದು ಸಾವಿರ ವರ್ಷಗಳಿದ್ದರು. ನಂತರ ಪ್ರದ್ಯುಮ್ನನು ತನ್ನ ಹೊಟ್ಟೆಯಲ್ಲಿರುವ ಜೀವರನ್ನು ಅನಿರುದ್ಧನ ಹತ್ತಿರ ಕೊಟ್ಟು ಸೃಷ್ಟಿ ಮಾಡಲು ಹೇಳಿದನು.

ನಿರ್ದೇಹಕಾನ್ ಸ ಭಗವಾನ್ ಅನಿರುದ್ಧ ನಾಮಾ
ಜೀವಾನ್ ಸ್ವಕರ್ಮಸಹಿತಾನುದರೇ ನಿವೇಶ್ಯ ।
ಚಕ್ರೇ ಥ ದೇಹಸಹಿತಾನ್ ಕ್ರಮಶಃ ಸ್ವಯಂಭು–
ಪ್ರಾಣಾತ್ಮಶೇಷಗರುಡೇಶಮುಖಾನ್ ಸಮಗ್ರಾನ್ ॥೯॥

ಅನಿರುದ್ಧನು ದೇಹರಹಿತರಾದ ಜೀವರನ್ನು ತನ್ನ ಉದರದಲ್ಲಿ ಇಟ್ಟುಕೊಂಡನು. ಅವರು ಕೇವಲ ಲಿಂಗದೇಹದಿಂದ ಕೂಡಿಕೊಂಡು ಮಾನಸಿಕವಾದ ಕರ್ಮಗಳನ್ನು ಮಾಡುತ್ತಿದ್ದವರು. ಅವರಿಗೆ ಅನಿರುದ್ಧನು ಸೂಕ್ಷ್ಮದೇಹವನ್ನು ದಯಪಾಲಿಸಿದನು. ಬ್ರಹ್ಮ ,ಮುಖ್ಯಪ್ರಾಣ, ಶೇಷ, ಗರುಡ, ರುದ್ರ ಮೊದಲಾದ ಎಲ್ಲ ದೇವತೆಗಳೂ, ಮತ್ತು ಇತರ ಜೀವರೂ ಎಲ್ಲರೂ ಅನಿರುದ್ಧನಿಂದ ಸೂಕ್ಷ್ಮ ದೇಹವನ್ನು ಹೊಂದಿದರು.

ಪಂಚಾತ್ಮಕಃ ಭಗವಾನ್ ದ್ವಿಷದಾತ್ಮ ಕೋ ಭೂತ್
ಪಂಚದ್ವಯೀ ಶತಸಹಸ್ರ ಪರೋಮಿತಶ್ಚ ।
ಏಕಃ ಸಮೋಪ್ಯಖಿಲದೋಷಸಮುಜ್ಝಿತೋಪಿ
ಸರ್ವತ್ರ ಪೂರ್ಣಗುಣಕೋಪಿ ಬಹೂಪಮೋಭೂತ್ ॥೧೦॥

ಈ ರೀತಿ ಪಂಚ (೫) ರೂಪಗಳಿಂದ ಕೂಡಿದ ಪರಮಾತ್ಮನು ದ್ವಾದಶ (೧೨) ರೂಪಗಳನ್ನು ತಾಳಿದನು. ನಂತರ ದಶ(೧೦) ರೂಪಗಳನ್ನು ತಾಳಿ ಶತ (೧೦೦) ರೂಪಗಳನ್ನು ಧರಿಸಿದನು. ಆಮೇಲೆ ಸಹಸ್ರ (೧೦೦೦) ರೂಪಗಳನ್ನು ಧರಿಸಿ, ಬಹುರೂಪ ಉಳ್ಳವನಾಗಿ ಕೊನೆಗೆ ಅಮಿತ ರೂಪತಾಳಿದನು.
ಅನಂತನಾದನು. ಒಬ್ಬನೇ ಪರಮಾತ್ಮನು ಅನಂತರೂಪ ತಾಳುತ್ತಾನೆ. ಈ ರೂಪಗಳಿಗೆ ಭೇದವೇ ಇಲ್ಲ. ಎಲ್ಲ ರೂಪಗಳಿಂದಲೂ ಸಮನಾಗಿಯೇ ಇರುವನು. ಅಂದರೆ ಯಾವ ರೂಪದಲ್ಲೂ ಉಚ್ಚ, ನೀಚ ಭಾವನೆ ಇಲ್ಲವೇ ಇಲ್ಲ. ಸರ್ವದೋಷ ವಿರಹಿತನು. ಪೂರ್ಣ ಗುಣಗಳುಳ್ಳವನು. ಹೀಗಿದ್ದರೂ ಕೂಡ ಬಹುವಿಧವಾದ ಜೀವರಿಗೆ ಸಾದೃಶ್ಯ ಉಳ್ಳವನಾದನು.

ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ
ನಿಶ್ಚೇತನಾತ್ಮಕಶರೀರಗುಣೈಶ್ಚ ಹೀನಃ ।
ಆನಂದಮಾತ್ರ ಕರಪಾದಮುಖೋದರಾದಿಃ
ಸರ್ವತ್ರ ಚ ಸ್ವಗತಭೇದವಿವರ್ಜಿತಾತ್ಮಾ ॥೧೧॥

ಈತನು ನಿರ್ದೋಷವೂ, ಪರಿಪೂರ್ಣವೂ ಆಗಿರುವ ಜ್ಞಾನಾನಂದಾದಿ ಗುಣಗಳೇ ಶರೀರವಾಗಿ ಉಳ್ಳವನು. ಸರ್ವಸ್ವತಂತ್ರನು. ಜಡದೇಹ ಆತನಿಗಿಲ್ಲ. ಪ್ರಾಕೃತ ಗುಣಗಳೂ ಅವನಿಗಿಲ್ಲ. ಕೇವಲ ಜ್ಞಾನಾನಂದಾತ್ಮಕಗಳಾದ ಕೈ-ಕಾಲು-ಮುಖ-ಹೊಟ್ಟೆ ಮೊದಲಾದ ಅವಯುವಗಳ್ಳುಳ್ಳವನು, ಸಮಸ್ತವಾದ ಅವನ ಅವತಾರ ರೂಪಗಳ್ಳಲ್ಲಿ ಭೇಧವೇ ಇಲ್ಲ.

ಕಾಲಾಚ್ಚ ದೇಶಗುಣತೋಽಸ್ಯ ನ ಚಾದಿರಂತೋ
ವೃದ್ಧಿ ಕ್ಷಯೌ ನ ತು ಪರಸ್ಯ ಸದಾತನಸ್ಯ ।
ನೈತಾದೃಶಃ ಕ್ವಚ ಬಭೂವ ನ ಚೈವ ಭಾವ್ಯೋ
ನಾಸ್ತ್ಯುತ್ತರಃ ಕಿಮು ಪರಾತ್ಪರಮಸ್ಯ ವಿಷ್ಣೋಃ ॥೧೨॥

ಈ ಪರಮಾತ್ಮನು ಯಾವಾಗಲೂ ಒಂದೇ ರೀತಿಯಲ್ಲಿರುವವನು. ಕಾಲ, ದೇಶ, ಗುಣ ಇವುಗಳಿಂದ ಈತನಿಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ವೃದ್ಧಿ , ಕ್ಷಯ ಎಂಬುದೂ ಈತನಿಗಿಲ್ಲ. ಶ್ರೀಹರಿಗೆ ಸಮಾನನು ಎಂದೂ ಇಲ್ಲ. ಮುಂದೂ ಇರುವುದಿಲ್ಲ. ಈಗಲೂ ಇಲ್ಲ. ಎಲ್ಲರಿಗಿಂತಲೂ ಉತ್ತಮಳಾದ ಲಕ್ಷ್ಮಿಗಿಂತಲೂ ಉತ್ತಮನಾದ ಈತನು ಎಲ್ಲೆಡೆಯಲ್ಲೂ ವ್ಯಾಪ್ತನಾಗಿರುವನು. ಈತನಿಗೆ ಸಮಾನನೇ ಇಲ್ಲವೆಂದಮೇಲೆ ಉತ್ತಮನು ಎಲ್ಲಿಂದ ?

ಸರ್ವಜ್ಞಃ ಈಶ್ವರತಮಃ ಸ ಚ ಸರ್ವಶಕ್ತಿಃ
ಪೂರ್ಣಾವ್ಯಯಾತ್ಮಬಲಚಿತ್ಸುಖವೀರ್ಯಸಾರಃ ।
ಯಸ್ಯಾಜ್ಞಯಾ ರಹಿತಮಿಂದಿರಯಾ ಸಮೇತಂ
ಬ್ರಹ್ಮೇಶಪೂರ್ವಕಮಿದಂ ನ ತು ಕಸ್ಯ ಚೇಶಮ್ ॥೧೩॥

ಈ ಪರಮಾತ್ಮನು ಸರ್ವಜ್ಞನು. ಬ್ರಹ್ಮರುದ್ರಾದಿಗಳಿಗೂ ಮುಖ್ಯ ನಿಯಾಮಕನು. ಸಕಲ ವಿಷಯದಲ್ಲಿ ಸಂಪೂರ್ಣ ಶಕ್ತಿ ಉಳ್ಳವನು. ಸ್ವರೂಪಭೂತಗಳಾದ ಬಲ-ಜ್ಞಾನ-ಸುಖ-ವೀರ್ಯ ಇವುಗಳಿಂದ ಕೂಡಿದವನು. ಇವುಗಳು ಪೂರ್ಣಗಳಾಗಿಯೂ, ವಿನಾಶವಿಲ್ಲದೆಯೂ, ವೃದ್ಧಿ ಹ್ರಾಸರಹಿತಗಳಾಗಿಯೂ ಇರುವವು. ಈ ಪರಮಾತ್ಮನ ಆಜ್ಞೆಯಿಲ್ಲದೆ ರಮಾ, ಬ್ರಹ್ಮ, ರುದ್ರಾದಿಗಳಿಂದ ಕೂಡಿದ ಈ ಜಗತ್ತು ಯಾವ

ಕಾರ್ಯಗಳನ್ನೂ ಮಾಡಲು ಸಮರ್ಥವಾಗಲಾರದು.

ಅಭಾಸಕೋಸ್ಯ ಪವನ: ಪವನಸ್ಯ ರುದ್ರಃ
ಶೇಷಾತ್ಮಕೋ ಗರುಡ ಏವ ಚ ಶಕ್ರ ಕಾಮೌ ।
?ದ್ರೇಶಯೋಸ್ತದಪರೇ ತ್ವನಯೋಶ್ಚ ತೇಷಾಮ್
ಋಷ್ಯಾದಯಃ ಕ್ರಮಶ ಊನಗುಣಾಃ ಶತಾಂಶಾತ್ ॥೧೪॥

ಶ್ರೀ ಹರಿಗೆ ಮುಖ್ಯಪ್ರಾಣದೇವರು ಪ್ರತಿಬಿಂಬರು. (ಭಗವಂತನಿಗೆ ಸ್ವಲ್ಪ ಸದೃಶರಾಗಿ, ಅವನ ಅಧೀನದಲ್ಲಿರುವವರು ) ಮುಖ್ಯಪ್ರಾಣನಿಗೆ ಮುಂದೆ ಶೇಷಪದವಿಯನ್ನು ಹೊಂದಲಿರುವ ರುದ್ರನೂ, ಗರುಡನೂ ಪ್ರತಿಬಿಂಬರು. ಈ ಗರುಡ ರುದ್ರರಿಗೆ ದೇವೇಂದ್ರನೂ, ಮನ್ಮಥನೂ ಪ್ರತಿಬಿಂಬರು. ಆ ದೇವೇಂದ್ರ ಹಾಗೂ ಮನ್ಮಥರಿಗೆ ಅಹಂಕಾರಿಕ ಪ್ರಾಣ-ಅನಿರುದ್ಧಾದಿಗಳೂ, ಚಂದ್ರ-ಸೂರ್ಯಾದಿಗಳೂ ಪ್ರತಿಬಿಂಬರು. ಆ ಸೂರ್ಯ-ಚಂದ್ರರಿಗೆ ಋಷ್ಯಾದಿಗಳು ಪ್ರತಿಬಿಂಬರು.ಇವರೆಲ್ಲರೂ ಕ್ರಮವಾಗಿ ಉತ್ತಮರಿಂದ ನೂರು ನೂರು ಅಂಶ ಕಡಿಮೆ ಉಳ್ಳವರು.

ಅಭಾಸಕಾ ತ್ವಥ ರಮಾಸ್ಯ ಮರುತ್ಸ್ವ ರೂಪಾ-
ಚ್ಛ್ರೇಷ್ಠಾ ಪ್ಯಜಾತ್ತದನು ಗೀಃ ಶಿವತೋ ವರಿಷ್ಠಾ ।
ತಸ್ಯಾ ಉಮಾ ವಿಪತಿನೀ ಚ ಗಿರಸ್ತಯೋಸ್ತು
ಶಚ್ಯಾದಿಕಾಃ ಕ್ರಮಶ ಏವ ಯಥಾ ಪುಮಾಂಸಃ ॥೧೫॥

ಮಂಗಲಸ್ವರೂಪಳಾದ ಶ್ರೀ ಲಕ್ಷ್ಮೀದೇವಿಯು ಶ್ರೀ ನಾರಾಯಣನ ಪ್ರತಿಬಿಂಬಳು. ಬ್ರಹ್ಮ-ವಾಯು ಇವರಿಗಿಂತ ಈ ಲಕ್ಷ್ಮೀದೇವಿಯು ಶ್ರೇಷ್ಠಳು. ಈ ಲಕ್ಷ್ಮೀ ದೇವಿಯು ಶ್ರೇಷ್ಠಳು. ಈ ಲಕ್ಷ್ಮೀದೇವಿಯರಿಗೆ, ರುದ್ರನಿಂದ ಶ್ರೇಷ್ಠರಾದ ಭಾರತೀ-ಸರಸ್ವತೀ ದೇವಿಯರು ಪ್ರತಿಬಿಂಬರು.ಆ ಸರಸ್ವತೀ-ಭಾರತಿಯರಿಗೆ ಪಾರ್ವತೀ-ಸೌಪರ್ಣಿಯರು ಪ್ರತಿಬಿಂಬರು. ಹೀಗೆ ಪುರುಷರಲ್ಲಿ ಬಿಂಬಪ್ರತಿಬಿಂಬಭಾವವಿರುವಂತೆ ಸ್ತ್ರೀಯರಲ್ಲೂ ಇದೆ.

ತಾಭ್ಯಶ್ಚ ತೆ ಶತಗುಣೈರ್ದಶತೋ ವರಿಷ್ಠಾಃ
ಪಂಚೋತ್ತರೈರಪಿ ಯಥಾ ಕ್ರಮಶಃ ಶ್ರುತಿಸ್ಥಾಃ ।
ಶಬ್ದೋ ೯ ಬಹುತ್ವವಚನಃ ಶತಮಿತ್ಯತಶ್ಚ
ಶ್ರುತ್ಯಂತರೇಷು ಬಹುಧೋಕ್ತಿವಿರುದ್ಧ ತಾ ನ ॥೧೬॥

ಸ್ತ್ರೀಯರಿಗಿಂತ ಪುರುಷರು ನೂರು (೧೦೦) ಹತ್ತು (೧೦) ಹದಿನೈದು (೧೫) ಈ ರೀತಿಯಾಗಿ ಕ್ರಮದಿಂದ ಯಥಾಯೋಗ್ಯ ಗುಣಗಳಿಂದ ಉತ್ತಮರಾಗಿರುವರು.

ಶ್ರುತಿಗಳಲ್ಲಿ ಯಾರುಯಾರು ಎಷ್ಟೆಷ್ಟು ಗುಣಗಳಿಂದ ಯಾರಿಂದ ಕಡಿಮೆಯಾಗಿರುವರು ಎಂದು ಹೇಳಲ್ಪಟ್ಟಿದೆಯೋ ಆ ರೀತಿಯಲ್ಲೇ, ಅದೇ ಕ್ರಮದಲ್ಲೇ ತಿಳಿದುಕೊಂಡಿರಬೇಕು. ಕೆಲವೆಡೆ ಶ್ರುತಿಗಳಲ್ಲಿ "ಶತ" ಎಂಬ ಶಬ್ಧಕ್ಕೆ ಪ್ರಸಂಗಕ್ಕೆ ಅನುಗುಣವಾಗಿ ದಶ-ಶತ_ಸಹಸ್ರ ಮೊದಲಾದ ಅರ್ಥವನ್ನು ಮಾಡಿಕೊಳ್ಳಬೇಕು. ಹೀಗೆ "ಶತ" ಎಂಬ ಶಬ್ಧವು ಬಹುತ್ವವನ್ನು ತಿಳಿಸುವುದರಿಂದ ಬೇರೆಬೇರೆ ಶ್ರುತಿವಾಕ್ಯಗಳಲ್ಲಿ ಬರುವ ಸಂಖ್ಯಾವಾಚಕಗಳಿಗೆ ವಿರೋಧವಿಲ್ಲ.

ತೇಷಾಂ ಸ್ವರೂಪಮಿದಮೇವ ಯತೋ ಥ ಮುಕ್ತಾ

ವಪ್ಯೇವಮೇವ ಸತತೋಚ್ಚವಿನೀಚರೂಪಾಃ ।
ಶಬ್ಧಃ ಶತಂ ದಶಸಹಸ್ರಮಿತಿ ಸ್ಮ ಯಸ್ಮಾ-
ತ್ತಸ್ಮಾನ್ನ ಹೀನವಚನೋ ಥ ತತೋ ಗ್ರ್ಯ ರೂಪಾಃ ॥೧೭॥

ಈ ತಾರತಮ್ಯವು ಜೀವರ ಸ್ವರೂಪಭೂತವಾದದ್ದು. ಆದ್ದರಿಂದ ಮುಕ್ತಿಯಲ್ಲೂ ಕೂಡ ಇದೇ ರೀತಿ ತಾರತಮ್ಯದಿಂದಲೇ (ಉಚ್ಚ, ನೀಚ) ಭಾವನೆಯಿಂದಲೇ ಇರುವರು. ಶತ-ದಶ-ಸಹಸ್ರ ಎನ್ನುವುದು ಬಹುತ್ವವನ್ನು ಹೇಳುತ್ತಿರುವ ಶಬ್ಧಗಳು ಎಂಬುದು ಐತರೇಯ ಉಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.ಆದ್ದರಿಂದ "ಶತ" ಎಂಬ ಶಬ್ಧವು ಹೆಚ್ಚಿನದ್ದನ್ನೇ ("ಹೆಚ್ಚು ಗುಣ ಉಳ್ಳವರು" ಎಂಬುದನ್ನೇ) ತಿಳಿಸುವ ಪ್ರಯುಕ್ತ (ಕಡಿಮೆ ಗುಣ ಉಳ್ಳವರು) ಎಂಬ ಅರ್ಥವನ್ನು ಅಂದರೆ ಅಲ್ಪತ್ವವನ್ನು ಹೇಳುವುದಿಲ್ಲ ಎಂದು ತಿಳಿಯಬೇಕು. ಆದ್ದರಿಂದ ಹಿಂದೆ ಹೇಳಲ್ಪಟ್ಟವರು ದಶ-ಶತಾದಿ ಗುಣಗಳಿಂದ ಶ್ರೇಷ್ಠರು ಎಂದು ತಿಳಿಯಬೇಕು.

ಏವಂ ನರೋತ್ತಮಪರಾಸ್ತು ವಿಮುಕ್ತಿ ಯೋಗ್ಯಾ
ಅನ್ಯೇ ಚ ಸಂಸೃತಿಪರಾ ಅಸುರಾಸ್ತಮೋಗಾಃ ।
ಏವಂ ಸದೈವ ನಿಯಮಃ ಕ್ವಚಿದನ್ಯಥಾ ನ
ಯಾವನ್ನ ಪೂರ್ತಿರುತ ಸಂಸೃತಿಗಾಃ ಸಮಸ್ತಾಃ ॥೧೮॥

ಈ ರೀತಿಯಾಗಿ ಮುಖ್ಯಪ್ರಾಣ ಮೊದಲುಗೊಂಡು ಮನುಷ್ಯೋತ್ತಮರವರೆಗೆ ಮುಕ್ತಿಯೋಗ್ಯರು ಮುಕ್ತಿಯನ್ನು ಹೊಂದುತ್ತಾರೆ. ಮಧ್ಯಮಮನುಷ್ಯರು ಸಂಸಾರದಲ್ಲೇ ಸುತ್ತುತ್ತಿರುತ್ತಾರೆ.ಆಸುರರು ತಮೋಯೋಗ್ಯರೇ- ತಮಸ್ಸನ್ನು ಹೊಂದುವವರೇ. ಈ ರೀತಿಯಾದ ಕ್ರಮಕ್ಕೆ, ನಿಯಮಕ್ಕೆ ಎಂದೂ ವ್ಯತ್ಯಾಸ ಬರಲಾರದು. ಈ ಮೂರುವಿಧ ಜೀವರು ತಮ್ಮ ತಮ್ಮ ಸಾಧನೆ ಪೂರ್ತಿಯಾಗುವತನಕ ಸಂಸಾರದಲ್ಲೇ ಇರುತ್ತಾರೆ.

ಪೂರ್ತಿಶ್ಚ ನೈವ ನಿಯಮಾದ್ಭವಿತಾ ಹಿ ಯಸ್ಮಾತ್
ತಸ್ಮಾತ್ಸಮಾಪ್ತಿಮಪಿ ಯಾಂತಿ ನ ಜೀವಸಂಘಾಃ ।

ಅನಂತ ಮೇವ ಗಣಶೋ ಸ್ತಿ ಯತೋ ಹಿ ತೇಷಾ–
ಮಿತ್ಥಂ ತತಃ ಸಕಲಕಾಲಗತಾ ಪ್ರವೃತ್ತಿಃ ॥೧೯॥

ಎಲ್ಲರಿಗೂ ಸಾಧ್ಯ ಸಮಾಪ್ತಿಯೂ ಏಕಕಾಲದಲ್ಲಿ ಆಗುವುದೇ ಇಲ್ಲ. ಇದು ಭಗವಂತನ ಸಂಕಲ್ಪ. ನಿಯಮವೇ ಹಾಗೆ. ಆದ್ದ ರಿಂದ ಜೀವರ ಸಮೂಹವೂ ಸಮಾಪ್ತಿಯನ್ನು ಹೊಂದುವುದೇ ಇಲ್ಲ. ಮತ್ತು ಜೀವರ ಗಣಗಳು (ಸಮುದಾಯಗಳು) ಅನಂತವಾಗಿವೆ. (ಬ್ರಹ್ಮ ಪದವಿಗೆ ಯೋಗ್ಯರಾದ ಜೀವರ ಗಣ, ರುದ್ರಪದವಿಗೆ ಯೋಗ್ಯರಾದ ಜೀವಗಣ, ಇಂದ್ರಪದವಿಗೆ ಯೋಗ್ಯರಾದ ಜೀವಗಣ – ಹೀಗೆ ಅನಂತ ಜೀವಗಣ. ಒಂದೊಂದು ಗಣದಲ್ಲೂ ಅನಂತಕೋಟಿ ಜೀವರು ಇರುವರು.) ಆದ್ದ ರಿದ ಸೃಷ್ಟಿಕಾರ್ಯ ಎಂಬುದು ಎಲ್ಲಾ ಕಾಲದಲ್ಲೂ ಇದ್ದೆ ೕ ಇರುವುದು.(ಒಬ್ಬರು ಹೋದರೆ ಮತ್ತೊಬ್ಬರು ಸಿದ್ಧ ರಾಗಿ ಕಾದೇ ಇರುತ್ತಾರೆ.)

ಏತೈಃ ಸುರಾದಿಭಿರತಿಪ್ರತಿಭಾದಿಯುಕ್ತೈಃ
ಯಿಕ್ತೈಃ ಸಹೈವ ಸತತಂ ಪ್ರವಿಚಿಂತಯದ್ಭಿಃ ।
ಪೂರ್ತೇರಚಿಂತ್ಯಮಹಿಮಃ ಪರಮಃ ಪರಾತ್ಮಾ
ನಾರಾಯಣೋ ಸ್ಯ ಗುಣವಿಸ್ತೃ ತಿರನ್ಯಗಾ ಕ್ವ ॥೨೦॥

ಆ ದೇವಾದಿಗಳೆಲ್ಲರೂ ಒಂದುಗೂಡಿ ಎಲ್ಲ ವೇದಶಾಸ್ತ್ರಗಳನ್ನೂ ಪರ್ಯಾಲೋಚಿಸುತ್ತಾ ಯಾವಾಗಲೂ ಭಗವಂತನ ಮಹಿಮೆಗಳನ್ನು ಚಿಂತಿಸುತ್ತಲೇ ಇರುವರು. ಆದರೆ ಆ ಮಹಿಮೆಗಳ ಕೊನೆಯನ್ನೆ ೕ ಅವರು ಕಾಣಲ್ಲಿಲ್ಲ. ಹೀಗೆ ಅಚಿಂತ್ಯ ಮಹಿಮನೂ, ಎಲ್ಲ ದೇವತೆಗಳಿಗಿಂತ ಉತ್ತಮನೂ, ಸರ್ವಸ್ವಾಮಿಯೂ ಆಗಿರುವನು ಆ ನಾರಾಯಣನು. ಈತನ ಗುಣವಿಸ್ತಾರವು ಯಾವ ದೇವತೆಗಳಿಗೆ ತಾನೇ ಇರಲು ಸಾಧ್ಯ?

ಸಾಮ್ಯಂ ನ ಚಾಸ್ಯ ಪರಮೇಣ ಚ ಕೇನ ಚಾಪ್ಯಂ
ಮುಕ್ತೇನ ಚ ಕ್ವಚಿದತಸ್ತ್ವ ಭಿದಾ ಕುತೋ ಸ್ಯ ।
ಪ್ರಾಪ್ಯೇತ ಚೇತನಗಣೈಃ ಸತತಾಸ್ವತಂತ್ರೈ
ರ್ನಿತ್ಯ ಸ್ವತಂತ್ರವಪುಷಃ ಪರಮಾತ್ಪರಸ್ಯ ॥೨೧॥

ಸರ್ವೋತ್ತಮನಾದ ಈತನ ಸಾಮ್ಯವನ್ನು ಮುಕ್ತರಾದವರಿಂದಲೂ ಹೊಂದಲಾಗದಿದ್ದ ಮೇಲೆ ಇವನಲ್ಲಿ ಐಕ್ಯ ಹೊಂದುವುದು ಎಲ್ಲಿಂದ? ಚೇತನ ಸಮುದಾಯವೋ ಯಾವಾಗಲೂ ಅಸ್ವತಂತ್ರವಾಗಿದೆ. ಈ ಲಕ್ಷ್ಮೀಪತಿಯೋ ಯಾವಾಗಲೂ ಸರ್ವಸ್ವತಂತ್ರನು. ಹೀಗಿರುವಾಗ ಜೀವರು ಭಗವಂತನಲ್ಲಿ ಐಕ್ಯ ಹೇಗೆ ತಾನೇ ಹೊಂದಿಯಾರು?

ಅಥೋ೯ ಯಮೇವ ನಿಖಿಲೈರಪಿ ವೇದವಾಕ್ಯೈಃ
ರಾಮಾಯಣೈಃ ಸಹಿತ ಬಾರತಪಂಚರಾತ್ರೈಃ ।
ಅನ್ಯೈಶ್ಚ ಶಾಸ್ತ್ರ ವಚನೈಃ ಸಹತತ್ವಸೂತ್ರೈಃ
ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥೨೨॥

ಈ ಅರ್ಥವನ್ನೇ ಸಕಲ ವೇದವಾಕ್ಯಗಳಿಂದಲೂ, ರಾಮಾಯಣದಿಂದ ಕೂಡಿದ ಭಾರತ, ಪಂಚರಾತ್ರ ಹಾಗೂ ಇತರ ಶಾಸ್ತ್ರವಚನಗಳು, ಮಾತ್ರವಲ್ಲದೆ ಬ್ರಹ್ಮಸೂತ್ರಗಳು ಇವುಗಳಿಂದ ಶ್ರೀಹರಿಯು (ವೇದವ್ಯಾಸರೂಪದಿಂದ) ನಿರ್ಣಯ ಮಾಡಿದ್ದಾನೆ.

ನಾರಾಯಣಸ್ಯ ನ ಸಮ ಪುರುಷೋತ್ತಮೋಹಂ
ಜೀವಾಕ್ಷರೇ ಹೃಧಿಗತೋ ಸ್ಮಿ ತತೋನ್ಯದಾರ್ತಮ್ ।
ಮುಕ್ತೋಪಸೃಪ್ಯ ಇಹ ನಾಸ್ತಿ ಕುತಶ್ಚ ಕಶ್ಚಿತ್
ನಾನೇವ ಧರ್ಮ ಪೃಥಗಾತ್ಮದೃಗೇತ್ಯಧೋ ಹಿ ॥೨೩॥

ಶ್ರೀನಾರಾಯಣನಿಗೆ ಸಮಾನನು ಯಾರೂ ಇಲ್ಲ. (ಭಗವಂತನು ತಾನೇ ಹೇಳಿಕೊಳ್ಳುತ್ತಾನೆ) "ಕ್ಷರ ಹಾಗೂ ಅಕ್ಷರ ಪುರುಷರಿಗಿಂತ ನಾನೇ ಉತ್ತಮನು. ಅವರಿಬ್ಬರನ್ನೂ ನಾನು ಮೀರಿದ್ದೇನೆ. ಅವರ ಹೃದಯದಲ್ಲಿದ್ದು ನಿಯಾಮಕನಾಗಿರುವೆ. " ಈ ಪರಮಾತ್ಮನನ್ನು ಹೊರತು ಉಳಿದವರೆಲ್ಲರೂ ದುಃಖದಿಂದ ಕೂಡಿದವರೇ, ಅಂದರೆ ಸಂಸಾರದಲ್ಲಿರುವವರೇ. (ಇಲ್ಲಿ ಲಕ್ಷ್ಮೀ, ಬ್ರಹ್ಮ, ವಾಯು, ಸರಸ್ವತಿ, ಭಾರತಿ ಈ ಐವರಿಗೆ ಮಾತ್ರ ದುಃಖವಿಲ್ಲ. ಉಳಿದವರೆಲ್ಲರಿಗೂ ದುಃಖವಿದ್ದೇ ಇದೆ ಎಂದು ತಿಳಿಯಬೇಕು.) ಶ್ರೀ ನಾರಾಯಣನು ಮುಕ್ತರಿಂದ ಹೊಂದಲ್ಪಡುತ್ತಾನೆ. ಅಂದರೆ ಮುಕ್ತರು ನಾರಾಯಣನನ್ನೇ ಹೊಂದುತ್ತಾರೆ. ನಾರಾಯಣನ ಅವಯುವಗಳಿಗೂ, ಆತನ ಸ್ವರೂಪಕ್ಕೂ ಭೇಧವಿಲ್ಲ. ಅವನ ಗುಣಗಳಿಗೂ, ಅವನಿಗೂ ಭೇಧವಿಲ್ಲ. ಆತನ ಅವತಾರರೂಪಕ್ಕೂ ಮೂಲರೂಪಕ್ಕೂ ಭೇಧವಿಲ್ಲ. ಯಾರಾದರೂ ಶ್ರೀ ನಾರಾಯಣನಿಗೂ ಅವನ ಧರ್ಮಗಳಿಗೂ (ರೂಪ, ಗುಣಗಳಿಗೂ) ಭೇಧವನ್ನು ಚಿಂತಿಸಿದರೆ ಅವರು ಅಂಧಃತಮಸ್ಸನ್ನು (ನಿತ್ಯನರಕವನ್ನು ) ಹೊಂದಬೇಕಾದೀತು.

ಆಭಾಸ ಏವ ಪೃಥಗೀಶತ ಏಷ ಜೀವೋ
ಮುಕ್ತಸ್ಯ ನಾಸ್ತಿ ಜಗತೋ ವಿಷಯೇ ತು ಶಕ್ತಿಃ ।
ಮತ್ರಾಪರೋಸಿ ನ ತು ತೇ ಶ್ನುವತೇ ಮಹಿತ್ವಂ
ಷಾಡ್ಗುಣ್ಯವಿಗ್ರಹ ಸುಪೂರ್ಣಗುಣೈಕದೇಹ ॥೨೪॥

ಜೀವನು ಪರಮಾತ್ಮನ ಪ್ರತಿಬಿಂಬನಾಗಿದ್ದು, ಆ ಪರಮಾತ್ಮನಿಂದ ಭಿನ್ನನೂ ಆಗಿರುವನು. ಮುಕ್ತರಾದ ಬ್ರಹ್ಮಾದಿಗಳಿಗೂ ಕೂಡ ಈ ಜಗತ್ತನ್ನು ನಿರ್ಮಿಸುವ ಶಕ್ತಿ

ಇರುವುದಿಲ್ಲ. (ವೇದಗಳು, ಪುರಾಣಗಳು ಈತನನ್ನು ಈ ರೀತಿ ಹೊಗಳುತ್ತವೆ. ) ಷಡ್ಗುಣೈಶ್ವರ್ಯಸಂಪನ್ನನೇ ! ಪೂರ್ಣವಾದ ಆನಂದಾದಿ ಗುಣಗಳೇ ಶರೀರವಾಗಿ ಉಳ್ಳವನೇ ! ನೀನು ದೇಶ, ಕಾಲ ಇವುಗಳ ಪರಿಮಾಣವನ್ನೂ ಮೀರಿರುವೆ. ನಿನ್ನ ಮಹಿಮೆಯನ್ನು ಯಾರೂ ಹೊಂದಲಾರರು.

ಮಾಹಾತ್ಮ್ಯದೇಹ ಸೃತಿ ಮುಕ್ತಿಗತೇ ಶಿವಶ್ಚ
ಬ್ರಹ್ಮಾಚ ತದ್ಗುಣಗತೌ ನ ಕಥಂ ಚ ನೇಶೌ ।
ನ ಶ್ರೀಃ ಕುತಸ್ತದಪರೇ ಸ್ಯ ಸುಖಸ್ಯ ಮಾತ್ರಾ-
ಮಶ್ನ ೦ತಿ ಮುಕ್ತಸುಗಣಾಶ್ಚ ಶತಾವರೇಣ ॥೨೫॥

(ವೇದಗಳು ಈತನನ್ನು ಹೊಗಳುತ್ತವೆ.) ಮಾಹಾತ್ಮ್ಯಗಳಿಂದ ಕೂಡಿದ ದೇಹ ಉಳ್ಳವನೇ! ಬಂಧ ಮೋಕ್ಷಗಳಿಗೆ ಸ್ವಾಮಿಯೇ, (ನಿನ್ನನ್ನು ಪೂರ್ಣವಾಗಿ ಅರಿತವರಾರು?) ಹೌದು, ರುದ್ರ, ಬ್ರಹ್ಮ ಇವರಿಂದಲೂ ಕೂಡ ಭಗವಂತನ ಸಂಪೂರ್ಣ ಗುಣಗಳನ್ನು ತಿಳಿಯಲಾಗಲಿಲ್ಲ. ಲಕ್ಷ್ಮೀದೇವಿಯೂ ಕೂಡ ಸಂಪೂರ್ಣ ತಿಳಿಯಲಿಕ್ಕೆ ಸಮರ್ಥಳಲ್ಲ ಅಂದಮೇಲೆ ಇತರರ ಪಾಡೇನು? ಮುಕ್ತಿಯಲ್ಲಿ ಪರಮತ್ಮನ ಆನಂದ (ಅವನಿಂದ ಕೊಡಲ್ಪಟ್ಟ ಆನಂದ)ವನ್ನೇ ಮುಕ್ತರು ಹೊಂದುತ್ತಾರೆ. ಈ ಆನಂದ ಎಲ್ಲರಿಗೂ ಸಮಾನವಾಗಿ ದೊರಕುವುದಿಲ್ಲ. ದೊಡ್ಡವರು ಹೊಂದುವ ಆನಂದದಿಂದ ನೂರು ಪಟ್ಟು ಕಡಿಮೆ ಚಿಕ್ಕವರು ಆನಂದವನ್ನು ಅನುಭವಿಸುವರು. ಅವರಿಗಿಂತ ಚಿಕ್ಕವರು ಇನ್ನೂ ನೂರು ಪಟ್ಟು ಕಡಿಮೆ ಆನಂದವನ್ನು ಅನುಭವಿಸುವರು.

ಆಭಾಸಕಾಭಾಸಪರಾವಭಾಸ
ರೂಪಾಣ್ಯಜಸ್ರಾಣಿ ಚ ಚೇತನಾನಾಮ್
ವಿಷ್ಣೋಃ ಸದೈವಾತಿವಶಾತ್ಕದಾಪಿ
ಗಚ್ಛಂತಿ ಕೇಶಾದಿಗಣಾ ನ ಮುಕ್ತೌ ॥೨೬॥

ವಿಷ್ಣುವಿನ ಪ್ರತಿಬಿಂಬ ಮುಖ್ಯಪಾಣನು. ಆತನ ಪ್ರತಿಬಿಂಬ ರುದ್ರ. ರುದ್ರನ ಪ್ರತಿಬಿಂಬ ದೇವೇಂದ್ರ. ಆತನಿಗೆ ಪ್ರಾಣ ದಕ್ಷ ಮೊದಲಾದವರು. ಇವರೆಲ್ಲರ ರೂಪಗಳೂ ನಿತ್ಯವಾದದ್ದು . ಲಕ್ಷ್ಮೀದೇವಿಯು ಯಾವಾಗಲೂ ಇವನ ವಶದಲ್ಲಿರುವವಳು, ಬ್ರಹ್ಮ, ರುದ್ರ ಮೊದಲಾದವರೆಲ್ಲರೂ, ಸಂಸಾರದಲ್ಲಾಗಲೀ, ಮುಕ್ತಿಯಲ್ಲಾಗಲೀ ಈ ಭಗವಂತನ ವಶದಲ್ಲೇ ಇರುವರು. ಯಾವಾಗಲೂ ಭಗವಂತನನ್ನು ಅತಿಕ್ರಮಿಸುವುದೇ ಇಲ್ಲ.

ಯಸ್ಮಿನ್ಪರೇನ್ಯೇಪ್ಯಜ ಜೀವಕೋಶಾ
ನಾಹಂ ಪರಾಯುರ್ನಮರೀಚಿಮುಖ್ಯಾಃ ।

ಜಾನಂತಿ ಯದ್ಗುಣಗಣಾನ್ನ ರಮಾದಯೋಽಪಿ
ನಿತ್ಯಃ ಸ್ವತಂತ್ರ ಉತ ಕೋಽಸ್ತಿ ತದನ್ಯ ಈಶಃ ॥೨೭॥

ಈ ಪರಮಾತ್ಮನಿಂದಲೇ ಸಕಲ ಜಗತ್ತು ಸೃಷ್ಟಿಸಲ್ಪಡುತ್ತದೆ. ಈತನ ಗುಣಗಳನ್ನು ನಾನಾಗಲೀ (ರುದ್ರದೇವರು) ಬ್ರಹ್ಮದೇವರಾಗಲೀ, ಮರೀಚಿ ಮೊದಲಾದ ಋಷಿಗಳಾಗಲೀ ಸಂಪೂರ್ಣ ತಿಳಿಯಲು ಸಮರ್ಥರಾಗುವುದಿಲ್ಲ. ಹೆಚ್ಚೇಕೆ, ರಮಾದೇವಿಯೂ ಕೂಡ ತಿಳಿದಿರುವುದಿಲ್ಲ. ಶ್ರೀಹರಿಯನ್ನು ಬಿಟ್ಟು ನಿತ್ಯಸ್ವತಂತ್ರನು, ಸರ್ವಸಮರ್ಥನು ಇನ್ನಾರು ಇರಲು ಶಕ್ಯ ? (ಯಾರೂ ಇಲ್ಲ.)

ನೈವೈಕ ಏವ ಪುರುಷಃ ಪುರುಷೋತ್ತಮೋ ಸಾ–
ವೇಕಃಕುತಃ ಸ ಪುರುಷೋ ಯತ ಏವ ಜಾತ್ಯಾ ।
ಅರ್ಥಾಚ್ಚು ತೇಶ್ಚ ಗುಣತೋ ನಿಜರೂಪತಶ್ಚ
ನಿತ್ಯಾನ್ಯ ಏವ ಕಥಮಸ್ಮಿ ಸ ಇತ್ಯಪಿ ಸ್ಯಾತ್ ॥೨೮॥

(ಕೆಲವರು ಹೇಳುವಂತೆ) ಪುರುಷನು ಒಬ್ಬನೇ ಅಲ್ಲ. ಬಹಳ ಜನ ಪುರುಷರಿರುವರು. ಅವರೆಲ್ಲರಿಗಿಂತಲೂ ಉತ್ತಮನು ಪರಮಾತ್ಮನೊಬ್ಬನೇ. ಅಂತಹ ಪರಮಾತ್ಮನೊಡನೆ ದೇವರು ಹೇಗೆ ತಾನೇ ಐಕ್ಯ ಹೊಂದಲು ಸಾಧ್ಯ? ಏಕೆಂದರೆ ಜೀವನು ಅಲ್ಪಶಕ್ತಿ ಉಳ್ಳವನು. ಈಶ್ವರನು ಪೂರ್ಣಶಕ್ತಿ ಉಳ್ಳವನು– ಜೀವನು ಅಲ್ಪಗುಣ, ಅಲ್ಪಜ್ಞಾನ, ಅಲ್ಪಸುಖ ಉಳ್ಳವನಾಗಿ ಪರಾಧೀನನಾಗಿರುವನು. ಆದರೆ, ಈಶ್ವರನು ಪೂರ್ಣಗುಣ, ಪೂರ್ಣಜ್ಞಾನ, ಪೂರ್ಣಸುಖ ಉಳ್ಳವನಾಗಿರುವನು. ಈ ಪರಮಾತ್ಮನಿಂದಲೇ ಜೀವನಿಗೆ ದುಃಖ ಪರಿಹಾರವಾಗಬೇಕಾಗಿದೆ. ಈ ರೀತಿ ದುಃಖಪರಿಹಾರರೂಪವಾದ ಪ್ರಯೋಜನವನ್ನು ಪರಮಾತ್ಮನಿಂದ ಜೀವನು ಇದಿರುನೋಡುತ್ತಿದಾನೆ. ಈ ಕಾರಣಗಳಿಂದ ಜೀವನು ಈಶ್ವರನಿಂದ ಅತ್ಯಂತ ಭಿನ್ನನು ಎಂದು ತಿಳಿಯಬಹುದಲ್ಲವೇ? ಮತ್ತು ವೇದಗಳೂ ಈ ವಿಷಯವನ್ನು ಸಾರಿ ಸಾರಿ ಹೇಳುತ್ತಿವೆ. ಹೀಗಿರುವಾಗ ನಾನೇ ದೇವರಾಗಿಬಿಡುತ್ತೇನೆ ಎಂಬುದಾಗಲೀ, ನಾನು ದೇವರ ಸಮಾನನಾಗುತ್ತೇನೆ ಎನ್ನುವುದಾಗಲೀ ಹೇಗೆ ಕೂಡುತ್ತದೆ? (ಹೇಗೆ ಸರಿಯಾಗುತ್ತದೆ?)

ಸರ್ವೋತ್ತಮೋ ಹರಿರಿದಂ ತು ತದಾಜ್ಞಯೈವ
ಚೇತುಂ ಕ್ಷಮಂ ಸ ತು ಹರಿಃ ಪರಮಃ ಸ್ವತಂತ್ರಃ।
ಪೂರ್ಣಾವ್ಯಯಾಗಣಿತ ನಿತ್ಯಗುಣಾರ್ಣವೋ ಸಾ–
ವಿತ್ಯೇವ ವೇದವಚನಾನಿ ಪರೋಕ್ತ್ಯಯಶ್ಚ ॥೨೯॥

ಶ್ರೀಹರಿಯು ರಮಾ–ಬ್ರಹ್ಮ–ರುದ್ರ ಮೊದಲಾದ ಎಲ್ಲರಿಂದಲೂ ಉತ್ತಮನು. ಈ

ಸಮಸ್ತ ಜಗತ್ತೂ ಶ್ರೀ ಹರಿಯು ಆಜ್ಞೆಯಿಂದಲೇ ಚೇಷ್ಟಾ ಮಾಡಲಿಕ್ಕೂ, ತಿಳಿಯಲಿಕ್ಕೂ ಸಮರ್ಥವಾಗಿದೆ. ಆ ಹರಿಯು ಸರ್ವೋತ್ತಮನು, ಸ್ವತಂತ್ರನು, ಆತನು ಉತ್ತಮ ಗುಣಗಳಿಂದ ಸಮುದ್ರದಂತಿರುವನು. ಆತನ ಗುಣಗಳು ಪೂರ್ಣವೂ, ನಿತ್ಯವೂ, ಹ್ರಾಸರಹಿತವೂ ಅಸಂಖ್ಯಾತವೂ ವ್ಯಾಪ್ತಗಳೂ ಆಗಿವೆ. ಇದನ್ನು ಸಕಲ ವೇದವಚನಗಳೂ, ವೇದವ್ಯಾಸರ ವಾಕ್ಯಗಳಾದ ಭಾರತ, ಪಂಚರಾತ್ರ ಹಾಗೂ ಸಕಲ ಪುರಾಣಗಳಲ್ಲಿ ಹೇಳುತ್ತವೆ.

ಋಗಾದಯಶ್ಚ ಚತ್ವಾರಃ ಪಂಚರಾತ್ರಂ ಚ ಭಾರತಮ್।
ಮೂಲರಾಮಾಯಣಂ ಬ್ರಹ್ಮಸೂತ್ರಂ ಮಾನಂ ಸ್ವತಃಸ್ಮೃ ತಂ ॥೩೦॥
ಅವಿರುದ್ಧಂ ಚ ಯತ್ತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ ।
ಏತದ್ವಿರುದ್ಧಂ ಯತ್ತುಸ್ಯಾನ್ನ ತನ್ಮಾನಂ ಕಥಂಚನ ॥೩೧॥

ಋಗ್ವೇದ ಮೊದಲಾದ ನಾಲ್ಕು ವೇದಗಳು, ಪಂಚರಾತ್ರಾಗಮ, ಮಹಾಭಾರತ, ಮೂಲರಾಮಾಯಣ, ಬ್ರಹ್ಮಸೂತ್ರ ಇವುಗಳೆಲ್ಲ ಸ್ವತಃ ಪ್ರಮಾಣಗಳು. ಈ ರೀತಿ ಮೇಲೆ ಹೇಳಿದ ಋಗಾದಿ ಶಾಸ್ತ್ರಗಳಿಗೆ ಯಾವ ವಾಕ್ಯಗಳು ಅವಿರುದ್ಧವಾಗಿವೆಯೋ ಅವುಗಳೂ ಪ್ರಮಾಣಗಳೇ. ಯಾವ ವಾಕ್ಯಗಳು ಮೇಲೆ ಹೇಳಿದ ಋಗಾದಿ ಶಾಸ್ತ್ರಗಳಿಗೆ ವಿರುದ್ಧವಾಗಿವೆಯೋ ಅವುಗಳು ಯಾವ ರೀತಿಯಿಂದಲೂ ಪ್ರಮಾಣವಾಗಲಾರವು.

ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಮಕತ್ವತಃ।
ಪ್ರಮಾಣಾನ್ಯೇವ ಮನ್ವಾದ್ಯಾಃ ಸ್ಮೃತಯೋಪ್ಯನುಕೂಲತಃ ॥೩೨॥
ಏತೇಷು ವಿಷ್ಣೋರಾಧಿಕ್ಯ ಮುಚ್ಯತೇನ್ಯಸ್ಯ ನ ಕ್ವಚಿತ್
ಅತಸ್ತದೇವ ಮಂತವ್ಯಂ ನಾನ್ಯಥಾ ತು ಕಥಂಚನ ॥೩೩॥

ವೈಷ್ಣವಪುರಾಣಗಳು ಪಂಚರಾತ್ರಾರ್ಥವನ್ನೇ ಪ್ರತಿಪಾದಿಸುವುದರಿಂದ ಅವುಗಳೆಲ್ಲ ಪ್ರಮಾಣಗಳು. ಮನುಸ್ಮೃತಿ ಮೊದಲಾದ ಸ್ಮೃತಿಗಳೂ ಕೂಡ ವಿಷ್ಣು ಸರ್ವೋತ್ತಮತ್ವಾದಿ ತತ್ವಗಳಿಗೆ ಅವಿರುದ್ಧವಾಗಿರುವುದರಿಂದ ಅವುಗಳೂ ಪ್ರಮಾಣಗಳೇ. ಈ ಎಲ್ಲ ಸ್ಮೃತಿ ಶ್ರುತಿಗಳೂ ವಿಷ್ಣುವಿನ ಸರ್ವೋತ್ತಮತ್ವವನ್ನೇ ಸಾರಿ ಸಾರಿ ಹೇಳುತ್ತಿವೆ. ರುದ್ರಾದಿಗಳ ಸರ್ವೋತ್ತಮತ್ವವನ್ನು ಎಲ್ಲೂ ಹೇಳುವುದಿಲ್ಲ. ಈ ರೀತಿಯಾಗಿ ವೇದಗಳು, ಪುರಾಣಾದಿಗಳು ವಿಷ್ಣುವಿಗೇ ಸರ್ವೋತ್ತಮತ್ವವನ್ನು ಹೇಳಿರುವ ಕಾರಣ ಭಕ್ತರೆಲ್ಲರೂ ವಿಷ್ಣು ಸರ್ವೋತ್ತಮನೆಂದೇ ತಿಳಿಯಬೇಕು. ಅದಕ್ಕೆ ವಿರುದ್ಧವಾಗಿ ತಿಳಿಯಬಾರದು.

ಮೋಹಾರ್ಥಾದನ್ಯ ಶಾಸ್ತ್ರಾಣಿ ಕೃತಾನ್ಯೇವಾಜ್ಞಯಾ ಹರೇಃ।
ಅತಸ್ತೇಷೂಕ್ತಮಗ್ರಾಹ್ಯಮಸುರಾಣಾಂ ತಮೋಗತೇಃ ॥೩೪॥

ಯಸ್ಮಾತ್ ಕೃತಾನಿ ತಾನೀಹ ವಿಷ್ಣುನೋಕ್ತೈಃ ಶಿವಾದಿಭಿಃ ।
ಏಷಾಂ ಯನ್ನ ವಿರೋಧಿ ಸ್ಯಾತ್ತತ್ರೋಕ್ತಂ ತನ್ನ ವಾರ್ಯತೇ ॥೩೫॥

ಅಸುರಜನ ಮೋಹಕ್ಕಾಗಿಯೂ, ಅವರನ್ನು ಅಂಧಂತಮಸ್ಸಿಗೆ ಕಳುಹಿಸುವ ಉದ್ದೇಶದಿಂದಲೂ ಪಾಶುಪತ ಶಾಸ್ತ್ರವನ್ನು ರುದ್ರದೇವರು ಮಾಡಿರುವರು. ಪರಮಾತ್ಮನ ಆಜ್ಞೆಯಿಂದಲೇ ಅವರು ಈ ರೀತಿ ಶಾಸ್ತ್ರವನ್ನು ಮಾಡಿದ್ದು, ಆದ್ದರಿಂದ ಸಜ್ಜನರು ಇದನ್ನು ಅಧ್ಯಯನ ಮಾಡಬಾರದು. ಈ ಪಾಶುಪತಾದಿ ಶಾಸ್ತ್ರಗಳಲ್ಲಿ ರುದ್ರಾದಿಗಳು ಉತ್ತಮರು ಎಂದು ಹೇಳಲ್ಪಟ್ಟಿದ್ದರೂ, ಕೆಲವೆಡೆಯಲ್ಲಿ ವಿಷ್ಣು ಸರ್ವೋತ್ತಮತ್ವವನ್ನೂ ಹೇಳಿದ್ದಾರೆ. ಹಾಗೆ ಯಾವ ವಾಕ್ಯಗಳು ವಿಷ್ಣು ಸರ್ವೋತ್ತಮತ್ವವನ್ನು ಹೇಳುತ್ತವೋ ಆ ವಾಕ್ಯಗಳು ಪ್ರಮಾಣಗಳು ಎಂದು ತಿಳಿಯಬೇಕು. ಉಳಿದದ್ದೆಲ್ಲವೂ ಅಪ್ರಮಾಣಗಳೇ.

ವಿಷ್ಣ್ವಾಧಿಕ್ಯವಿರೋಧೀನಿ ಯಾನಿ ವೇದವಚಾಂಸ್ಯಪಿ ।
ತಾನಿಯೋಜ್ಯಾನ್ಯಾನುಕುಲ್ಯಾದ್ವಿಷ್ಣ್ವಾಧಿಕ್ಯಸ್ಯ ಸರ್ವಶಃ ॥೩೬॥

ವಿಷ್ಣುಸರ್ವೋತ್ತಮತ್ವಕ್ಕೆ ವಿರುದ್ಧವಾದ ಅರ್ಥವನ್ನು ಹೇಳುವ ವೇದವಾಕ್ಯಗಳಿಗೂ ಕೂಡ ವಿಷ್ಣುಸರ್ವೋತ್ತಮತ್ವ ಪರವಾಗಿಯೇ ಅರ್ಥ ಮಾಡಬೇಕೇ ಹೊರತು ಬೇರೆ ರೀತಿ ಅರ್ಥ ಮಾಡಲೇಬಾರದು.

ಅವತಾರೇಷು ಯತ್ಕಿಂಚಿದ್ದರ್ಶಯೇರವದ್ಧರಿಃ ।
ತಚ್ಚಾಸುರಾಣಾಂ ಮೋಹಾಯ ದೋಷಾ ವಿಷ್ಣೋರ್ನಹಿಕ್ವಚಿತ್ ॥೩೭॥

ಅವತಾರಸಮಯದಲ್ಲಿ, ಕೆಲವೊಮ್ಮೆ ಶ್ರೀಹರಿಯು ಸಾಮಾನ್ಯ ಮನುಷ್ಯರಂತೆ ವರ್ತಿಸುವುದೂ ಇದೆ. ಇದೆಲ್ಲ ಅಸುರಜನಮೋಹಕ್ಕಾಗಿ ಎಂದು ತಿಳಿಯಬೇಕು. ಯಾಕೆಂದರೆ ಆ ವಿಷ್ಣುವಿಗೆ ಯಾವ ದೋಷವೂ ಇಲ್ಲ.

ಅಜ್ಞತ್ವಂ ಪಾರವಶ್ಯತ್ವಂ ವಾ ವೇದಭೇದಾದಿಕಂ ತಥಾ ।
ತಥಾ ಪ್ರಾಕೃತ ದೇಹತ್ವಂ ದೇಹತ್ಯಾಗಾದಿಕಂ ತಥಾ ॥೩೮॥
ಅನೀಶತ್ವಂ ಚ ದುಃಖಿತ್ವಂ ಸಾಮ್ಯಮನ್ಯೈಶ್ಚ ಹೀನತಾಮ್ ।
ಪ್ರದರ್ಶಯತಿ ಮೋಹಾಯ ದೈತ್ಯಾದೀನಾಂ ಹರಿಃ ಸ್ವಯಮ್ ॥೩೯॥

ಅಸುರಜನ ಮೋಹಕ್ಕಾಗಿ ಭಗವಂತನು ಅಜ್ಞಾನಿಯಂತೆಯೂ, ಇನ್ನೊಬ್ಬರ ವಶದಲ್ಲಿರುವವನಂತೆಯೂ, ಒಮ್ಮೊಮ್ಮೆ ತೋರಿಸಿಕೊಳ್ಳುತ್ತಾನೆ. ಕೆಲವೊಮ್ಮೆ ತಲೆ ಒಡೆದುಕೊಂಡಂತೆ, ಕಾಲು ಸೀಳಿಕೊಂಡಂತೆ, ತೋರಿಸುತ್ತಾ ಪ್ರಾಕೃತಶರೀರವಿರುವವನಂತೆ

ಕಾಣಿಸಿಕೊಳ್ಳುತ್ತಾನೆ, ಮಾತ್ರವಲ್ಲದೆ ದೇಹತ್ಯಾಗ ಮಾಡುವಂತೆಯೂ ತೋರಿಸಿಕೊಳ್ಳುತ್ತಾನೆ. ಮತ್ತೂ ಸಾಮರ್ಥ್ಯವಿಲ್ಲದವನಂತೆಯೂ, ದುಃಖವುಳ್ಳವನಂತೆಯೂ, ಇತರರಿಗೆ ಸಮಾನನಂತೆಯೂ ತೋರಿಸಿಕೊಳ್ಳುತ್ತಾನೆ. ಕೆಲವೊಮ್ಮೆ ಇತರರಿಗಿಂತ ತಾನು ಕಡಿಮೆ ಎಂದೂ ತೋರಿಸಿಕೊಳ್ಳುವುದುಂಟು. ಇದೆಲ್ಲ ಅಸುರರಿಗೆ ವಿಪರೀತ ಜ್ಞಾನ ಹುಟ್ಟಿಸಲಿಕ್ಕಾಗಿ ಭಗವಂತನು ಮಾಡುವುದು.

ನ ತಸ್ಯ ಕಶ್ಚಿದ್ದೋಷೋಸ್ತಿ ಪೂರ್ಣಾಖಿಲ ಗುಣೋಹ್ಯಸೌ ।
ಸರ್ವದೇಹಸ್ಥ ರೂಪೇಷು ಪ್ರಾದುರ್ಭಾವೇಷು ಚೇಶ್ವರಃ ॥೪೦॥

ಸಕಲ ದೇಹದೊಳಗೂ ನೆಲೆಸಿರುವ ಆ ಭಗವಂತನ ರೂಪಗಳಲ್ಲಿಯಾಗಲೀ, ಆತನ ಅವತಾರರೂಪಗಳಲ್ಲಾಗಲೀ ಆ ವಿಷ್ಣುವಿಗೆ ಯಾವ ದೋಷಗಳೂ ಇಲ್ಲ. ಈತನು ಸಮಸ್ತ ಗುಣಪೂರ್ಣನಾಗಿರುವನು.

ಬ್ರಹ್ಮಾದ್ಯಭೇದಃ ಸಾಮ್ಯಂ ವಾ ಕುತಸ್ತಸ್ಯ ಮಹಾತ್ಮನಃ ।
ಯದೇವಂ ವಾಚಕಂ ಶಾಸ್ತ್ರಂ ತದ್ಧಿ ಶಾಸ್ತ್ರಂ ಪರಂಮತಮ್ ॥೪೧॥

ಆ ಮಹಾನುಭಾವನಿಗೆ ಬ್ರಹ್ಮ, ರುದ್ರ ಮೊದಲಾದ ದೇವತೆಗಳಿಂದ ಅಭೇದವಾಗಲಿ, ಸಾಮ್ಯವಾಗಲಿ ಹೇಗೆ ಬಂದೀತು? ಈ ರೀತಿಯಾಗಿ ಮೇಲೆ ಹೇಳಿದ ವಿಷಯಗಳನ್ನು ಯಾವ ಶಾಸ್ತ್ರವು ಹೇಳುತ್ತದೋ ಅದೇ ಉತ್ತಮ ಶಾಸ್ತ್ರವು.

ನಿರ್ಣಯಾಯೈವ ಯತ್ಪ್ರೋಕ್ತಂ ಬ್ರಹ್ಮಸೂತ್ರಂ ತು ವಿಷ್ಣುನಾ ।
ವ್ಯಾಸ ರೂಪೇಣ ತದ್ಗ್ರಾಹ್ಯಂ ತತ್ರೋಕ್ತಾಃ ಸರ್ವ ನಿರ್ಣಯಾಃ ॥೪೨॥

ವೇದವ್ಯಾಸರೂಪದಿಂದ ಅವತರಿಸಿದ ಶ್ರೀವಿಷ್ಣುವು ಸರ್ವಶಾಸ್ತ್ರಾರ್ಥವನ್ನು ನಿರ್ಣಯ ಮಾಡಲಿಕ್ಕಾಗಿಯೇ ಬ್ರಹ್ಮಸೂತ್ರವನ್ನು ರಚನೆ ಮಾಡಿರುವರು. ಅದನ್ನು ಅವಶ್ಯ ಸ್ವೀಕರಿಸಬೇಕು. ಅಲ್ಲಿ ಹೇಳಿದ ಸಕಲವನ್ನೂ ನಿರ್ಣಯ ಮಾಡುವ ಯುಕ್ತಿಗಳನ್ನು ತಿಳಿದುಕೊಳ್ಳಬೇಕು.

ಯಥಾರ್ಥ ವಚನಾನಾನಂ ಚ ಮೋಹಾರ್ಥಾನಾಮು ಚ ಸಂಶಯಮ್ ।
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ ॥೪೩॥

ಶಾಸ್ತ್ರಗಳಲ್ಲಿರುವ ಯಥಾರ್ಥ ವಚನಗಳು, ಹಾಗೂ ಮೋಹಕವಾದ ವಚನಗಳು ಇವುಗಳನ್ನು ಕೇಳುವಾಗ ಜನರಿಗೆ ಸಂದೇಹ ಉಂಟಾಗುತ್ತದಲ್ಲವೇ? ಈ ಸಂದೇಹವನ್ನು ಕಳೆಯುವುದಕ್ಕಾಗಿಯೇ ಪೂಜ್ಯರಾದ ವೇದವ್ಯಾಸದೇವರು

ಬ್ರಹ್ಮಸೂತ್ರವನ್ನು ರಚನೆ ಮಾಡಿರುವರು.

ತಸ್ಮಾತ್ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ॥
ಆದ್ದರಿಂದ ಬ್ರಹ್ಮಸೂತ್ರಗಳ ಅರ್ಥವನ್ನು ಚೆನ್ನಾಗಿ ತಿಳಿದುಕೊಂಡೇ ಸಕಲ ಶಾಸ್ತ್ರಗಳ ಅರ್ಥವನ್ನು ನಿರ್ಣಯ ಮಾಡಬೇಕು.

ಸರ್ವದೋಷ ವಿಹೀನತ್ವಂ ಗುಣೈಃ ಸರ್ವೈರುದೀರ್ಣತಾ ॥೪೪॥
ಅಭೇದಃ ಸರ್ವರೂಪೇಷು ಜೀವಭೇದಃ ಸದೈವ ಹಿ ।
ವಿಷ್ಣೋರುಕ್ತಾನಿ ಸೂತ್ರೇಷು ಸರ್ವವೇದೇಡ್ಯತಾ ತಥಾ ॥೪೫॥
ತಾರತಮ್ಯಂ ಚ ಮುಕ್ತಾನಾಂ ವಿಮುಕ್ತಿರ್ವಿದ್ಯಯಾ ತಥಾ ।
ತಸ್ಮಾದೇತದ್ವಿರುದ್ಧಂ ಯನ್ಮೋಹಾರ್ಥಂ ತದುದಾಹೃತಮ್ ॥೪೬॥

(ಈ ಬ್ರಹ್ಮಸೂತ್ರದಲ್ಲಿ ಕೆಳಕಂಡ ವಿಷಯಗಳನ್ನು ವೇದವ್ಯಾಸರು ಸಮರ್ಥಿಸಿದ್ದಾರೆ.) ಭಗವಂತನಲ್ಲಿ ಯಾವ ದೋಷಗಳೂ ಇಲ್ಲ. (ಸಕಲ ದೋಷಗಳಿಂದಲೂ ದೂರನಾಗಿದ್ದಾನೆ.) ಸಕಲ ಗುಣಗಳಿಂದಲೂ ಉತ್ಕೃಷ್ಟನಾಗಿದಾನೆ. ಆತನ ರೂಪಗಳಿಗೆ ಭೇದವೇಇಲ್ಲ. (ಸಕಲ ಅವತಾರರೂಪಗಳಿಗೂ ಅಭೇದವೇ) ಜೀವರಿಗೂ, ಪರಮಾತ್ಮನಿಗೂ ಭೇದವೇ ಯಾವಾಗಲೂ ಇರುವುದು. ಜೀವರಲ್ಲೂ ಪರಸ್ಪರ ಭೇದವೇ ಯಾವಾಗಲೂ ಇರುವುದು. ಭಗವಂತನು ಸಕಲ ವೇದಗಳಿಂದಲೂ ಸ್ತೋತ್ರ ಮಾಡಲ್ಪಡುತ್ತಾನೆ. (ಸಕಲ ವೇದಗಳೂ ಭಗವಂತನನ್ನೇ ಸ್ತೋತ್ರ ಮಾಡುತ್ತವೆ.) ಮುಕ್ತರಲ್ಲೂ ತಾರತಮ್ಯವಿದೆ- ಉತ್ತಮ ವಿದ್ಯೆಯಿಂದಲೇ ಮುಕ್ತಿಯು. ಈ ರೀತಿ ಉತ್ತಮ ವಿಷಯಗಳು ಬ್ರಹ್ಮಸೂತ್ರಗಳಲ್ಲಿ ಹೇಳಿರುವುದರಿಂದ ಈ ಬ್ರಹ್ಮಸೂತ್ರಗಳಿಗೆ ವಿರುದ್ಧವಾದ ಎಲ್ಲ ವಾಕ್ಯಗಳೂ ಅಸುರಜನ ಮೋಹಕ್ಕಾಗಿ ಎಂದು ತಿಳಿಯಬೇಕು.

ತಸ್ಮಾದ್ಯೇಯೇ ಗುಣಾ ವಿಷ್ಣೋರ್ಗ್ರಾಹ್ಯಾಸ್ತೇ ಸರ್ವ ಏವತು ।
ಇತ್ಯಾದ್ಯುಕ್ತಂ ಭಗವತಾ ಭವಿಷ್ಯತ್ಪರ್ವಣಿ ಸ್ಫುಟಮ್ ॥೪೭॥

ಆದ್ದರಿಂದ ಯಾವ ಯಾವ ಗುಣಗಳು ವೇದದಲ್ಲಿ ಭಗವಂತನಿಗೆ ಹೇಳಲ್ಪಟ್ಟಿದ್ದೆಯೋ ಅವುಗಳೆಲ್ಲವನ್ನೂ ಸ್ವೀಕರಿಸಬೇಕು. ಇತ್ಯಾದಿ ವಿಷಯಗಳ್ಳನ್ನು ವೇದವ್ಯಾಸರು "ಭವಿಷ್ಯಪರ್ವ" ಎಂಬ ಗ್ರಂಥದಲ್ಲಿ ವಿಸ್ತರಿಸಿ ಹೇಳಿರುವರು.

ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ಮೋಹಯಿಷ್ಯತಿ ।
ತ್ವಂಚ ರುದ್ರ ಮಹಾಬಾಹೋ ಮೋಹ ಶಾಸ್ತ್ರಾಣಿ ಕಾರಯ ॥೪೮॥
ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚ ಮಾಂ ಕುರು ॥೪೯॥

ಇತಿ ವಾರಾಹವಚನಂ ಬ್ರಹ್ಮಾಂಡೋಕ್ತಂ ತಥಾ ಪರಮ್
ಆಮೋಹಾಯ ಗುಣಾ ವಿಷ್ಣೋರಾಕಾರಶ್ಚಿಚ್ಛರೀರತಾ ॥೫೦॥
ನಿರ್ದೋಷತ್ವಂ ತಾರತಮ್ಯಂ ಮುಕ್ತಾನಾಮಪಿ ಚೋಚ್ಯತೇ ।
ಏತದ್ವಿರುದ್ಧಂ ಯತ್ಸರ್ವಂ ತನ್ಮೋಹಾಯೇತಿ ನಿರ್ಣಯಃ ॥೫೧॥

ವಿಷ್ಣುವು ರುದ್ರದೇವರನ್ನು ಕುರಿತು ಹೇಳುತ್ತಾನೆ –"ರುದ್ರ ! ಅಸುರ ಜನರನ್ನು ಮೋಹಗೊಳಿಸುವ, ಮೋಹಶಾಸ್ತ್ರಗಳನ್ನು ಕೈಲಾಸಯಾತ್ರೆ ಮೊದಲಾದ ಮೋಹಕ ಕೃತ್ಯಗಳನ್ನೂ ನಾನು ಮಾಡುತ್ತೇನೆ, ನೀನೂ ಹಾಗೆಯೇ ಮಾಡು. ಮತ್ತೂ ನಿನ್ನ ವರಿಂದಲೂ ಮಾಡಿಸು. ನೀನು ಮಾಡಿರುವ ಮೋಹಕಶಾಸ್ತ್ರದಲ್ಲಿ ವಿಪರೀತವಾದ ವಿಷಯಗಳನ್ನೆಲ್ಲ ಸೇರಿಸು (ಅಂದರೆ ವಿಷ್ಣುವು ವರಾಹರೂಪದಿಂದ ಶಿವಲಿಂಗದ ಮೂಲವನ್ನು ಹುಡುಕಲಿಕ್ಕೆ ಹೋಗಿ ಆಗದೆ ಹಿಂದಿರುಗಿದ್ದು, ಭಸ್ಮಧಾರಣೆ, ಲಿಂಗಧಾರಣೆ ಮಾಡಿದ್ದು, ಕೈಲಾಸಕ್ಕೆ ಹೋಗಿ ರುದ್ರನನ್ನು ಕೃಷ್ಣ ತಪಸ್ಸು ಮಾಡಿದ್ದು ಮೊದಲಾದ ವಿಷಯಗಳನ್ನು ನೀನು ಮಾಡುವ ಮೋಹಕಶಾಸ್ತ್ರದಲ್ಲಿ ತೋರಿಸು.)ನೀನೇ (ಶಿವನೇ) ಸರ್ವಜ್ಞ ಸರ್ವೋತ್ತಮ ಎಂದು ಅದರಲ್ಲಿ ಸಮರ್ಥನೆ ಮಾಡಿಕೊಳ್ಳು. "ವಿಷ್ಣುವು ಶಿವನಿಗಿಂತ ಚಿಕ್ಕವ" ಎಂದು ಪ್ರಸಿದ್ಧಿಪಡಿಸು. ನನ್ನನ್ನು ಅಪ್ರಸಿದ್ಧನನ್ನಾಗಿಯೂ ಅದರಲ್ಲಿ ಸಮರ್ಥಿಸು". ಈ ರೀತಿಯಾಗಿ ವಿಷ್ಣು–ರುದ್ರರ ಸಂವಾದ ವರಾಹಪುರಾಣದಲ್ಲಿದೆ. ಮತ್ತು ಬ್ರಹ್ಮಾಂಡಪುರಾಣದಲ್ಲಿ ಭಗವಂತನ ಮಹಿಮೆ, ಹಾಗೂ ಕೆಲವು ಉತ್ತಮ ವಿಷಯಗಳೂ ಕೆಳಕಂಡ ರೀತಿಯಲ್ಲಿ ಹೇಳಿದ್ದಾರೆ. "ಭಗವಂತನು ಗುಣಪೂರ್ಣನು. ಅವನ ದೇಹ, ರೂಪ , ಆಕಾರ, ಇವುಗಳೆಲ್ಲ ಜ್ಞಾನಾನಂದಾತ್ಮಕವಾದದ್ದು. ಆತನಲ್ಲಿ ಯಾವ ದೋಷವೂ ಇಲ್ಲ. ಮುಕ್ತರಲ್ಲೂ ಕೂಡ ತಾರತಮ್ಯವಿದೆ." ಈ ರೀತಿಯಾದ ವಿಷಯಗಳನ್ನು ಸಜ್ಜನರಿಗುಂಟಾದ ಮೋಹವನ್ನು (ಸಂದೇಹವನ್ನು) ಪರಿಹಾರ ಮಾಡಲಿಕ್ಕಾಗಿಯೇ ಬ್ರಹ್ಮಾಂಡ ಪುರಾಣದಲ್ಲಿ ಹೇಳಿದ್ದಾರೆ. ಆದ್ದರಿಂದ ಇದಕ್ಕೆ ವಿರುದ್ಧವಾದ ಎಲ್ಲ ವಿಷಯಗಳೂ ಅಸುರಜನ ಮೋಹಕ್ಕೆ ಎಂದು ತಿಳಿಯಬೇಕು.

ಸ್ಕಾಂದೇಪ್ಯುಕ್ತಂ ಶಿವೇನೈವ ಷಣ್ಮುಖಾಯೈವ ಸಾದರಮ್ ।
ಶಿವಶಾಸ್ತ್ರೇಪಿ ತದ್ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿ ಯತ್ ॥೫೨॥
ಪರಮೋ ವಿಷ್ಣುರೇವೈಕಸ್ತಜ್ಜ್ಞಾನಂ ಮುಕ್ತಿಸಾಧನಮ್ ।
ಶಾಸ್ತ್ರಾಣಾಂ ನಿರ್ಣಯಸ್ತ್ವೇಷ ಸ್ತದನ್ಯನ್ಮೋಹನಾಯ ಹಿ ॥೫೩॥
ಜ್ಞಾನಂ ವಿನಾತು ಯಾ ಮುಕ್ತಿಃ ಸಾಮ್ಯಂ ಚ ಮಮ ವಿಷ್ಣುನಾ।
ತೀರ್ಥಾದಿ ಮಾತ್ರತೋ ಜ್ಞಾನಂ ಮಮಾಧಿಕಂ ಚ ವಿಷ್ಣುತಃ ॥೫೪॥
ಅಭೇದಶ್ಚಾಸ್ಮದಾದೀನಾಂ ಮುಕ್ತಾನಾಂ ಹರಿಣಾ ತಥಾ ।
ಇತ್ಯಾದಿ ಸರ್ವಂ ಮೋಹಾಯ ಕಥ್ಯತೇ ಪುತ್ರ ನಾನ್ಯಥಾ ॥೫೫॥

ಸ್ಕಾಂದ ಪುರಾಣದಲ್ಲೂ ಕೂಡ ರುದ್ರದೇವರು ತನ್ನ ಮಗನಾದ ಷಣ್ಮುಖ ನ ಹತ್ತಿರ ಆದರದಿಂದ ಹೇಳಿದ ಮಾತೂ ಇದೆ. ವಸ್ತುತಃ ಇದು ಶಿವಶಾಸ್ತ್ರ.ಆದರೂ ಕೂಡ ಭಗವಂತನ ಶಾಸ್ತ್ರಕ್ಕೆ ಅನುಕೂಲವಾಗಿದ್ದ ರೆ ಶಿವಶಾಸ್ತ್ರದಲ್ಲಿದ್ದ ರೂ ಕೂಡ ಅದನ್ನು ನಾವು ಸ್ವೀಕರಿಸಬಹುದು.

ರುದ್ರನು ಮಗನ ಹತ್ತಿರ ಹೇಳುತ್ತಾನೆ- ಮಗ ! ಷಣ್ಮುಖ ! ವಿಷ್ಣು ಒಬ್ಬನೇ ಸರ್ವೋತ್ತಮನು. ಈ ರೀತಿಯಾದ ಜ್ಞಾನವೇ ಮುಕ್ತಿಗೆ ಸಾಧನ. ಸಕಲಶಾಸ್ತ್ರಗಳ ನಿರ್ಣಯವೂ ಹೀಗೆಯೇ ಇದೆ. ಇದಕ್ಕೆ ವಿರುದ್ಧ ವಾದ ವಾಕ್ಯಗಳೆಲ್ಲವೂ ಅಸುರಜನ ಮೋಹಕ್ಕಾಗಿಯೇ ಇದೆ. ಕೆಲವೆಡೆಗಳಲ್ಲಿ "ಮೋಕ್ಷಕ್ಕೆ ಜ್ಞಾನದ ಅವಶ್ಯಕತೆಯಿಲ್ಲ. ಕಾಶಿಯಲ್ಲಿ ಮರಣ ಹೊಂದಿದರೇ ಸಾಕು. ಮೋಕ್ಷವಾಗಿಬಿಡುತ್ತದೆ" ಎಂದು ಹೇಳಲ್ಪಟ್ಟಿದೆ. ಮತ್ತೊಂದು ಕಡೆಯಲ್ಲಿ ನಾನೂ (ಶಿವನೂ) ವಿಷ್ಣುವೂ ಸಮಾನ ಎಂದೂ ಹೇಳಲ್ಪಟ್ಟಿದೆ. ಮಗ ! ಇದೆಲ್ಲ ಅಸುರರ ಮೋಹಕ್ಕಾಗಿಯೇ ಇರುವುದು. ಮತ್ತೂ ಜ್ಞಾನ ಬರಬೇಕಾದರೆ ತೀರ್ಥಯಾತ್ರೆಯೇ ಸಾಕು. ಗುರುಸೇವೆ, ವೇದಾಧ್ಯಯನ ಇವಾವುದೂ ಬೇಕಾಗಿಲ್ಲ. ವಿಷ್ಣುವಿಗಿಂತ ನಾನೇ (ಶಿವನೇ) ದೊಡ್ಡವ ಎಂದೂ ಕೆಲವು ಕಡೆಯಲ್ಲಿ ಹೇಳಲ್ಪಟ್ಟಿದೆ. ಅದು ಮಾತ್ರವಲ್ಲದೆ, "ಶಿವ, ಬ್ರಹ್ಮ, ವಿಷ್ಣು ಎಲ್ಲ ಒಬ್ಬರೇ. ಈ ಮೂವರಲ್ಲಿ ಯಾವ ಭೇಧವೂ ಇಲ್ಲ. ಮತ್ತೂ ಮುಕ್ತರಾದವರಿಗೂ, ವಿಷ್ಣುವಿಗೂ ಭೇಧವೇ ಇಲ್ಲ. ಎಲ್ಲರೂ ಐಕ್ಯ ಹೊಂದಿಬಿಡುತ್ತಾರೆ" ಎಂದೂ ಕೆಲವು ಶಾಸ್ತ್ರವಾಕ್ಯಗಳು ಹೇಳುತ್ತವೆ. ಮಗ, ಷಣ್ಮುಖ ! ಇದೆಲ್ಲ ಅಯೋಗ್ಯರಿಗೆ ಮೋಹ ಉಂಟು ಮಾಡಲಿಕ್ಕಾಗಿಯೇ ಹೇಳಲ್ಪಟ್ಟಿದೆಯೇ ಹೊರತು ಬೇರಾವ ಕಾರಣಕಾಗಿಯೂ ಅಲ್ಲ.

ಉಕ್ತಂ ಪಾದ್ಮಪುರಾಣೇ ಚ ಶೈವ ಏವ ಶಿವೇನ ತು।
ಯದುಕ್ತಂ ಹರಿಣಾ ಪೂರ್ವ ಮುಮಾಯೈ ಪ್ರಾಹ ತದ್ಧ ರಃ ॥೩೬॥

ಇದೇ ವಿಷಯವನ್ನು ಪಾದ್ಮಪುರಾಣದಲ್ಲೂ ಈಶ್ವರ ಹಾಗೂ ಪಾರ್ವತಿಯ ಸಂವಾದರೂಪದಲ್ಲಿ ಹೇಳಿದ್ದಾ ರೆ. ವಸ್ತುತಃ ಪಾದ್ಮ ಪುರಾಣದ ಪೂರ್ವಕಾಂಡವು ಶಿವಸರ್ವೋತ್ತಮತ್ವವನ್ನು ಹೇಳುವ ಭಾಗ. ಆ ಭಾಗದಲ್ಲೇ ಶ್ರೀಹರಿಯು ತನ್ನನ್ನು (ಈಶ್ವರನನ್ನು ) ಕುರಿತು ಹೇಳಿದ ಮಾತನ್ನೇ ಪಾರ್ವತಿಗಾಗಿ ಈಶ್ವರನು ಪ್ರೀತಿಯಿಂದ ಹೇಳಿದನು.

ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ।
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥೩೭॥
ಸ್ವಾಗಮೈಃ ಕಲ್ಪಿತೈಸ್ತ್ವಂ ಚ ಜನಾನ್ಮದ್ವಿಮುಖಾನ್ ಕುರು ।
ಮಾಂ ಚ ಗೋಪಯ ಯೇನ ಸ್ಯಾತ್ ಸೃಷ್ಟಿರೇಷೋತ್ತರಾಧರಾ ॥೩೮॥

ಭಗವಂತನು ರುದ್ರದೇವರನ್ನು ಕುರಿತು ಹೇಳುತ್ತಿದ್ದಾನೆ. "ರುದ್ರ !ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ನಾನು ಮನುಷ್ಯರೂಪದಿಂದ ಮನುಷ್ಯರ ಮಧ್ಯದಲ್ಲಿ ಅವತರಿಸಿ ನಿನ್ನನ್ನು ಚೆನ್ನಾಗಿ ಆರಾಧಿಸುತ್ತೇನೆ, ಮತ್ತು ಯಾವಾಗಲೂ ನಿನ್ನಿಂದ ವರವನ್ನೂ ಪಡೆಯುತ್ತೇನೆ. ನೀನೂ ಕೂಡ ಪಾಶುಪತ ಆಗಮಗಳನ್ನು ರಚಿಸು.ಅದರಲ್ಲಿ ನಿನ್ನ (ಶಿವನ) ಸರ್ವೋತ್ತಮತ್ವವನ್ನು ಚೆನ್ನಾಗಿ ಪ್ರತಿಪಾದಿಸುವಲ್ಲಿ ನನ್ನ (ಹರಿಯ) ಸರ್ವೋತ್ತಮತ್ವವನ್ನು ಚೆನ್ನಾಗಿ ಮರೆಮಾಡು. ನನ್ನ ಮಾಹಿತಿಯನ್ನೇ ಮರೆಮಾಡಿಬಿಡುವ ಮೂಲಕ ಜನರನ್ನು ವಿಮುಖರನ್ನಾಗಿ ಮಾಡು. ನಾವಿಬ್ಬರೂ ಹೀಗೆ ಮಾಡುವುದರಿಂದ ಕೃತಯುಗಾದಿಗಳಲ್ಲಿ ಸತ್ಕರ್ಮದಲ್ಲಿ ಪ್ರವರ್ತಿಸಿದ ದುರ್ಜನರು ದುರ್ಮಾರ್ಗವನ್ನು ಹಿಡಿದು ನರಕಾದಿ ಅಧೋಗತಿಯನ್ನು ಈ ಸೃಷ್ಟಿಯಲ್ಲಿ ಹೊಂದುವಂತಾಗಲಿ.

ನ ಚ ವೈಷ್ಣವಶಾಸ್ತ್ರೇಷು ವೇದೇಷ್ವಪಿ ಹರೇಃ ಪರಃ ।
ಕ್ವಚಿದುಕ್ತೋ ನ್ಯ ಶಾಸ್ತ್ರೇಷು ಪರಮೋ ವಿಷ್ಣುರೀರಿತಃ ॥೫೯॥

ಸರ್ವೋತ್ತಮನು ಎಲ್ಲೂ ಯಾವ ಭಾಗದಲ್ಲೂ ಹೇಳಲ್ಪಟ್ಟಿಲ್ಲ. ಆದರೆ, ಇತರ ಶೈವಾದಿ ಶಾಸ್ತ್ರಗಳಲ್ಲಿ ಅಲ್ಲಲ್ಲಿ ವಿಷ್ಣುವು ಸರ್ವೋತ್ತಮನೆಂದು ಹೇಳಲ್ಪಟ್ಟಿದೆ.

ನಿರ್ದೋಷತ್ವಾಚ್ಚ ವೇದಾನಾಂ ವೇದೋಕ್ತಂ ಗ್ರಾಹ್ಯಮೇವ ಹಿ ।
ವೇದೇಷ್ವಪಿ ಪರೋ ವಿಷ್ಣುಃ ಸರ್ವಸ್ಮಾದುಚ್ಯತೇ ಸದಾ ॥೬೦॥

ವೇದಗಳು ಅಪೌರಿಷೇಯವಾದ ಕಾರಣ ಅವುಗಳಲ್ಲಿ ಯಾವ ದೋಷಗಳೂ ಇಲ್ಲ. ಈ ರೀತಿಯಾದ ನಿರ್ದುಷ್ಟಗಳಾದ ವೇದಗಳಲ್ಲಿ ಹೇಳಲ್ಪಟ್ಟ ಪ್ರಮೇಯವು ಗ್ರಾಹ್ಯವೇ ಆಗಿದೆ. ಇದು ಪ್ರಸಿದ್ಧ ವೇದಗಳಲ್ಲಿ ಕೂಡ ಶ್ರೀಹರಿಯು ಬ್ರಹ್ಮ ರುದ್ರಾದಿ ದೇವತೆಗಳಿಗಿಂತಲೂ ಶ್ರೀಹರಿಯೇ ಯಾವಾಗಲೂ ಉತ್ತಮನೆಂದು ಹೇಳಲ್ಪಟ್ಟಿದೆ.

ಅಸ್ಯದೇವಸ್ಯ ಮೀಹ್ಳುಷೋ ವಯಾ
ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ ।
ವಿದೇಹಿ ರುದ್ರೋ ರುದ್ರಿಯಂ ಮಹಿತ್ವಂ
ಯಾಸಿಸ್ಟಂ ವರ್ತಿರಶ್ವಿನಾವಿರಾವತ್ ॥೬೧॥

ಅಕಾರ ಶಬ್ಧ ವಾಚ್ಯನಾದ ಪರಮಾತ್ಮನು ಕ್ರೀಡಾದಿಗುಣವಿಶಿಷ್ಟನು. ಭಕ್ತರಿಗೆ ಪ್ರಿಯವಾದ ಪುರುಷಾರ್ಥಗಳನ್ನು ಕೊಡುವವನು. ಅಪ್ರತಿಹತ (ತಡೆಯಿಲ್ಲದ) ಇಚ್ಛೆಯುಳ್ಳವನು. ಇಂತಹ ಮಹಿಮೆಗಳುಳ್ಳ ವಿಷ್ಣುವಿಗೆ, ಯಜ್ಞಸಂಬಂಧಿಯಾದ ಹವಿಸ್ಸುಗಳಿಂದ ಪೂಜೆ ಮಾಡಿಯೇ ಅಹಂಕಾರ ರೂಪದಿಂದ ಬಂಧಕನಾದ ರುದ್ರನು ರುದ್ರಪದವಿಯನ್ನೂ,

ಮಹತ್ವವನ್ನೂ ಹೊಂದಿದನು. ಆದ್ದರಿಂದ ಅಶ್ವಿನಿ ದೇವತೆಗಳಿರಾ ! ನೀವೂ ಕೂಡ ವಿಷ್ಣುವಿಗೆ ಪೂಜೆ ಮಾಡಿ ಯಜ್ಞದಲ್ಲಿ ಹವಿರ್ಭಾಗವುಳ್ಳ ವೃತ್ತಿಯನ್ನು (ನಿಮ್ಮ ಪದವಿಯನ್ನು ) ಹೊಂದುವಿರಿ.

ಸ್ತುಹಿ ಶ್ರುತಂ ಗರ್ತಸದಂ ಯುವಾನಂ
ಮೃಗಂ ನ ಭೀಮಮುಪಹತ್ನು ಮುಗ್ರಮ್ ।
ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ ॥೬೨॥

ಓ ರುದ್ರನೇ ! ಶ್ರುತಿಪ್ರತಿಪಾದ್ಯನಾದ ನರಸಿಂಹನು ಹೃದಯಗುಹೆಯಲ್ಲಿರುವವನು. ನಿತ್ಯವೂ ತರುಣನು. ಸಿಂಹದಂತೆ ಉಗ್ರನು. ಶತ್ರುಗಳಿಗೆ ಅತಿ ಭಯಂಕರನು. ಹಿರಣ್ಯಕಶಿಪುವನ್ನೂ , ಆತನ ಸೈನ್ಯವನ್ನೂ ಕೊಂದವನು. ಇಂತಹ ಮಹಿಮೆಗಳುಳ್ಳ ನರಸಿಂಹನನ್ನು ಸ್ತೋತ್ರ ಮಾಡು.
(ಲಕ್ಷ್ಮೀದೇವಿಯು ಹೇಳುತ್ತಿದ್ದಾಳೆ- ಯಾರ್ಯಾರನ್ನು ರುದ್ರನನ್ನಾಗಿ ಮಾಡಲು ಇಚ್ಛಿಸುವೆನೋ, ಅವರೆಲ್ಲರನ್ನೂ ರುದ್ರನನ್ನಾಗಿ ಮಾಡುವೆನು. ಹೀಗೆಯೇ ಯಾರನ್ನು ಬ್ರಹ್ಮನನ್ನಾಗಿ ಮಾಡಬೇಕೆಂದು ಇಚ್ಛಿಸುವೆನೋ ಅವರನ್ನು ಬ್ರಹ್ಮನನ್ನಾಗಿ ಮಾಡುವೆನು. ಯಾರನ್ನು ಋಷಿಯನ್ನಾಗಲೀ, ಜ್ಞಾನಿಯನ್ನಾಗಲೀ ಮಾಡಲಿಕ್ಕೆ ಇಚ್ಛಿಸುವೆನೋ ಅವರನ್ನು ಋಷಿಯನ್ನಾಗಲೀ, ಜ್ಞಾನಿಯನ್ನಾಗಲೀ ಮಾಡಿಬಿಡುವೆನು.)

ಏಕೋ ನಾರಾಯಣ ಆಸೀನ್ನ ಬ್ರಹ್ಮಾನ ಶಂಕರಃ ।
ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾನ ಚ ಶಂಕರಃ ॥೬೩॥

ಒಬ್ಬನೇ ನಾರಾಯಣನು ಸೃಷ್ಟಿಯ ಆದಿಯಲ್ಲಿದ್ದನು. ಬ್ರಹ್ಮನೂ ಇರಲಿಲ್ಲ.ರುದ್ರನೂ ಇರಲಿಲ್ಲ. ಈ ವಾಸುದೇವನೇ ಈ ರಮಾ ಬ್ರಹ್ಮಾದಿ ಜಗತ್ತಿಗಿಂತ ಪೂರ್ವದಲ್ಲಿ(ಪ್ರಳಯ ಕಾಲದಲ್ಲಿ) ಇದ್ದನು. ಆಗ ಬ್ರಹ್ಮನೂ ಇರಲಿಲ್ಲ, ರುದ್ರನೂ ಇರಲಿಲ್ಲ.

ಯದಾಪಶ್ಯಃ ಪಶ್ಯತೇ ರುಕ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್
ತದಾವಿದ್ವಾನ್ ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥೬೪॥

ಸರ್ವೋತ್ತಮನಾದ ಭಗವಂತನು ಬಂಗಾರದಂಥ ಬಣ್ಣ ಉಳ್ಳವನು. ಸರ್ವ ಜಗತ್ ಕರ್ತನು. ಸರ್ವರಿಗೂ ಸ್ವಾಮಿಯು. ಪೂರ್ಣ ಷಡ್ಗುಣಗಳುಳ್ಳವನು. ಚತುರ್ಮುಖ

ಬ್ರಹ್ಮನಿಗೆ ಕಾರಣನಾದವನು. ಇಂತಹ ಮಹಿಮೆಗಳುಳ್ಳ ಭಗವಂತನ ರೂಪವನ್ನು ಯಾವ ಜೀವನು ನೋಡುತ್ತಾನೋ (ಸಾಕ್ಷಾತ್ಕರಿಸಿಕೊಳ್ಳುತ್ತಾನೋ) ಇಂತಹ ಅಪರೋಕ್ಷಜ್ಞಾನಿಯು ಮೋಕ್ಷಕ್ಕೆ ಪ್ರತಿಬಂಧಕವಾದ ಅನಿಷ್ಟಪುಣ್ಯವನ್ನೂ , ಸಕಲ ಪಾಪಗಳನ್ನೂ ಕಳೆದುಕೊಂಡು, "ಅಂಜನೆ"ಯಿಂದ ಅಂದರೆ ಅವಿದ್ಯೆಯಿಂದ ರಹಿತನಾಗಿ ಉತ್ತಮ ಸಾಮ್ಯವನ್ನು ಅಂದರೆ ನಿರ್ದುಃಖತ್ವ, ನಿರಂಜನತ್ವ, ನಿತ್ಯಾನಂದತ್ವ, ಸಂಸಾರರಾಹಿತ, ಮೊದಲಾದವುಗಳಿಂದ ಸಾಮ್ಯವನ್ನು ಹೊಂದುತ್ತಾನೆ. (ಇಲ್ಲಿ ಸಾಮ್ಯವೆಂದರೆ ಪರಮಾತ್ಮನ ಸಮಾನತೆ ಎಂದರ್ಥವಲ್ಲ. ಮತ್ತೇನೆಂದರೆ ಭಗವಂತನು, ದುಃಖ, ಅವಿದ್ಯೆ, ಸಂಸಾರ , ಇವುಗಳಿಂದ ರಹಿತನಾಗಿ ಆನಂದದಿಂದ ಇರುವಂತೆ ಮುಕ್ತರೂ ಕೂಡ ಯಥಾಯೋಗ್ಯ ಅವನಂತೆಯೇ ದುಃಖ, ಅವಿದ್ಯೆ, ಸಂಸಾರದಿಂದ ರಹಿತರಾಗಿ ಯೋಗ್ಯತೆಗೆ ಅನುಗುಣವಾಗಿ ಆನಂದದಿಂದ ಇರುತ್ತಾರೆ. ಈ ವಿಷಯದಲ್ಲಿ ಮಾತ್ರ ಸಾಮ್ಯ.)

ಯೋ ವೇದ ನಿಹಿತಂ ಗುಹಾಯಾಂ ಪರಮೇವ್ಯೋಮನ್ ।
ಸೋ ಶ್ನುತೇ ಸರ್ವಾನ್ಕಾಮಾನ್ಸಹ ಬ್ರಹ್ಮಣಾ ವಿಪಶ್ಚಿತಾ ॥೬೫॥

ಯಾರು ತನ್ನ ಹೃದಯಗುಹೆಯಲ್ಲಿರುವ, ಹೃತ್ಪದ್ಮಾಕಾಶದಲ್ಲಿ ನೆಲೆಸಿರುವ ನಾರಾಯಣನನ್ನು ತಿಳಿದುಕೊಳ್ಳುವನೋ (ಅಪರೋಕ್ಷೀಕರಿಸಿಕೊಳ್ಳುವನೋ) ಅವನು ಮುಕ್ತನಾದ ಮೇಲೆ ಸರ್ವಜ್ಞನಾದ ಪರಬ್ರಹ್ಮನಿಂದ ಕೂಡಿಕೊಂಡು ತನಗೆ ಯೋಗ್ಯಗಳಾದ ಸರ್ವ ಇಷ್ಟಾರ್ಥಗಳನ್ನೂ ಅನುಭವಿಸುತ್ತಾನೆ.

ಪ್ರಘಾನ್ವಸ್ಯ ಮಹತೋ ಮಹಾನಿ
ಸತ್ಯಾ ಸತ್ಯಸ್ಯ ಕರಣಾನಿ ವೋಚಮ್ ।
ಸತ್ಯಮೇನ ಮನು ವಿಶ್ವೇ ಮದಂತಿ
ರಾತಿಂ ದೇವಸ್ಯ ಗೃಣತೋ ಮಘೋನಃ ॥೬೬॥

ಸರ್ವೋತ್ತಮನೂ, ಪಾರಮಾರ್ಥಿಕಸತ್ಯನೂ ಆಗಿರುವನು ಶ್ರೀಹರಿಯು. ಇವನು ಮಾಡುವ ಜಗತ್ಸೃಷ್ಟತ್ವ, ಪಾಲಕತ್ವ ಮೊದಲಾದ ಎಲ್ಲ ಕರ್ಮಗಳೂ ಯಥಾರ್ಥವನ್ನಾಗಿಯೇ (ಪಾರಮಾರ್ಥಿಕ ಸತ್ಯವನ್ನಾಗಿಯೇ) ನಿಶ್ಚಯವಾಗಿ ಹೇಳುವೆನು. ತನ್ನನ್ನು ಸ್ತೋತ್ರ ಮಾಡುವ ಇಂದ್ರನ ಪೂಜೆಯನ್ನು ಸ್ವೀಕರಿಸಿ, ಬಲಿಯನ್ನು ಸೋಲಿಸಿ ಮೂರು ಲೋಕವನ್ನು ದಾನ ಮಾಡಿದನು. ದೇವತೆಗಳು "ಸತ್ಯವಾದ ಜಗತ್ತಿನ ದಾನ" " ಸತ್ಯವಾದ ಪರಮಾತ್ಮನ ದಾನ " (ಎಲ್ಲವೂ ಪಾರಮಾರ್ಥಿಕ ಸತ್ಯವೇ") ಎಂದು ಹೇಳುತ್ತಾ ಸಂತೋಷ ಹೊಂದಿದರು.

ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ

ವಸು ಸ್ವಾರ್ಹಮುತ ಜೇತೋತ ದಾತಾ ।
ಸತ್ಯಃ ಸೋ ಅಸ್ಯ ಮಹಿಮಾ ಗೃಣೇ ಶವೋ
ಯಜ್ಞೇಷು ವಿಪ್ರರಾಜ್ಯೇ ॥೬೭॥

ಸ್ಪೃಹಣೀಯವಾದ (ಮೂರು ಲೋಕಗಳು ಐಶ್ವರ್ಯವನ್ನು ಬಲಿಯಿಂದ ಗೆದ್ದು ಇಂದ್ರನಿಗೆ ದಾನವಾಗಿ ಕೊಟ್ಟಿರುವ ಈ ಪರಮಾತ್ಮನು ಸೃಷ್ಟಿ ಮಾಡಿದ ಈ ಜಗತ್ತು ಸತ್ಯವೇ. ಮಿಥ್ಯೆಯಲ್ಲ. ಬ್ರಾಹ್ಮಣರೇ ಪ್ರಧಾನರಾಗಿಉಳ್ಳ ಯಜ್ಞದಲ್ಲಿ ಸತ್ಯವಾದ ಈತನ ಮಹಿಮೆಯನ್ನು ಸುಖವನ್ನು ಪಡೆಯಲಿಕ್ಕಾಗಿ ಸ್ತೋತ್ರ ಮಾಡುವೆನು. ಯಜ್ಞಗಳನ್ನು ಭೋಗಿಸುವವನೂ, ಯಜ್ಞಗಳ ಫಲವನ್ನು ನೀಡುವವನೂ, ಯಜ್ಞೇಶ್ವರನೂ, ಹಾಗೂ ಯಜ್ಞರಕ್ಷಕನೂ ಆಗಿರುವ ಈತನ ಮಹಿಮೆಯು ಸತ್ಯವೇ.

ಸತ್ಯಾ ವಿಷ್ಣೋರ್ಗುಣಾಃ ಸರ್ವೇ ಸತ್ಯಾ ಜೀವೇಶಯೋರ್ಭಿದಾ ।
ಸತ್ಯೋ ಮಿಥೋ ಜೀವಭೇದಃ ಸತ್ಯಂ ಚ ಜಗದೀದೃಶಮ್ ॥೬೮॥

ಶ್ರೀ ವಿಷ್ಣುವಿನ ಆನಂದಾದಿ ಗುಣಗಳೆಲ್ಲ ಸತ್ಯವೇ. ಜೀವೇಶರ ಭೇದವೂ ಪಾರಮಾರ್ಥಿಕ ಸತ್ಯವೇ. ಪರಸ್ಪರವಾಗಿ ಜೀವರ ಭೇದವೂ ಸತ್ಯವೇ. ಅರ್ಥ, ಕ್ರಿಯೆಗಳಲ್ಲಿ ಉಪಯುಕ್ತವಾದ ಜಗತ್ತೂ ಸತ್ಯವೇ.

ಅಸತ್ಯಃ ಸ್ವಗತೋ ಭೇದೋ ವಿಷ್ಣೋರ್ನಾನ್ಯದಸತ್ಯಕಮ್ ।
ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದ ಸಮನ್ವಿತಃ ॥೬೯॥

ಶ್ರೀ ವಿಷ್ಣುವಿನ ಅವತಾರರೂಪಗಳಲ್ಲಿ ಪರಸ್ಪರ ಭೇದವು ಅಸತ್ಯವು. ಆದರೆ, ಅವತಾರ ರೂಪಗಳಲ್ಲಿ ತೋರುವ ಮಹಿಮೆಗಳು ಸತ್ಯವೇ. ಆತನು ಮಾಡುತ್ತಿರುವ ಜಗತ್ಸೃಷ್ಟ್ಯಾದಿ ವಾಪಾರಗಳು ಸತ್ಯವೇ. ಪಂಚಭೇದಗಳಿಂದ ಕೂಡಿದ ಈ ಜಗತ್ಪ್ರವಾಹವೂ ಸತ್ಯವೇ.

ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಮ್ ।
ಜಡೇಶಯೋರ್ಜಡಾನಾಂ ಚ ಜಡಜೀವಭಿದಾ ತಥಾ ॥೭೦॥
ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ನಿತ್ಯಶಃ ।
ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ ॥೭೧॥

ಜೀವನಿಗೂ ಪರಮಾತ್ಮನಿಗೂ ಭೇದ, ಜೀವನಿಗೂ ಜೀವನಿಗೂ ಭೇದ, ಜಡಕ್ಕೂ ಈಶ್ವರನಿಗೂ ಭೇದ, ಜಡಕ್ಕೂ ಜಡಕ್ಕೂಭೇದ, ಜಡಕ್ಕೂ ಜೀವನಿಗೂ ಭೇದ, ಈ ರೀತಿ ಐದು ಭೇದಗಳು. ಸಂಸಾರವಸ್ಥೆಯಲ್ಲೂ, ಮೋಕ್ಷದಲ್ಲೂ ಕೂಡ ನಿತ್ಯವಾಗಿರುವವು,

ಮುಕ್ತರಿಗೂಕೂಡ ತಾರತಮ್ಯ ನಷ್ಟವಾಗುವುದಿಲ್ಲ. ಅಂದರೆ ಮುಕ್ತರೂ ಕೂಡ ತಾರತಮ್ಯದಿಂದಲೇ ಇರುತ್ತಾರೆ.

ಕ್ಷಿತಿಪಾ ಮನುಷ್ಯಗಂಧರ್ವಾ ದೇವಾಶ್ಚ ಪಿತರಶ್ಚಿರಾಃ ।
ಆಜಾನಜಾಃ ಕರ್ಮಜಾಶ್ಚ ದೇವಾ ಇಂದ್ರಃ ಪುರಂದರಃ ॥೭೨॥
ರುದ್ರಃ ಸರಸ್ವತೀವಾಯುರ್ಮುಕ್ತಾಃ ಶತಗುಣೋತ್ತರಾಃ ।
ಏಕೋ ಬ್ರಹ್ಮಾಶ್ಚ ವಾಯುಶ್ಚ ವೀಂದ್ರೋ ರುದ್ರ ಸಮಸ್ತಥಾ ॥೭೩॥
ಏಕೋ ರುದ್ರಸ್ತಥಾಶೇಷೋ ನ ಕಶ್ಚಿದ್ವಾಯುನಾಸಮಃ ।
ಮುಕ್ತೇಷು ಶ್ರೀಸ್ತಥಾ ವಾಯೋಃ ಸಹಸ್ರಗುಣಿತಾ ಗುಣೈಃ ॥೭೪॥
ತತೋನಂತಗುಣೋ ವಿಷ್ಣುರ್ನಕಶ್ಚಿತ್ತತ್ಸಮಃ ಸದಾ ।

(ಈಗ ಯಾರಿಂದ ಯಾರು ದೊಡ್ಡವರು ಎಂಬುದನ್ನು ತಿಳಿಸುವ ಮೂಲಕ ತಾರತಮ್ಯವನ್ನು ವಿವರಿಸುತ್ತಿದ್ದಾರೆ.)

ಮನುಷ್ಯೋತ್ತಮರು, ಇವರಿಗಿಂತ ಚಕ್ರವರ್ತಿಗಳು ದೊಡ್ಡವರು. ಅವರಿಗಿಂತ ಮನುಷ್ಯ ಗಂಧರ್ವರು, ನಂತರ ದೇವಗಂಧರ್ವರು, ಅವರಿಗಿಂತ ಪಿತೃಗಣದವರು ದೊಡ್ಡವರು. ಇವರಿಗಿಂತ ಚಿರಪಿತೃಗಳು ದೊಡ್ಡವರು. ಅವರಿಗಿಂತ ಆಜಾನಜರು (ಹುಟ್ಟಿನಿಂದ ದೇವತೆಗಳು) ದೊಡ್ಡವರು. ಇವರಿಗಿಂತ ಕರ್ಮಜರು (ಕರ್ಮದಿಂದ ದೇವತಾಪದವಿ ಹೊಂದಿದವರು -ಬಲಿಚಕ್ರವರ್ತಿ, ಪೃಥು ಮೊದಲಾದವರು) ದೊಡ್ಡವರು. ಇವರಿಗಿಂತ ದೇವತೆಗಳು (ಶತಸ್ಥ ದೇವತೆಗಳು) ದೊಡ್ಡವರು. ಇವರಿಗಿಂತ ಇಂದ್ರ ದೊಡ್ಡವನು. ಇವನಿಗಿಂತ ರುದ್ರದೇವರು ದೊಡ್ಡವರು. ಇವರಿಗಿಂತ ಸರಸ್ವತಿ ದೊಡ್ಡವಳು. ಇವಳಿಗಿಂತ ವಾಯುದೇವರು ದೊಡ್ಡವರು. ಈ ರೀತಿಯಲ್ಲಿ ಮುಕ್ತರೂ ಕೂಡ ಕ್ರಮವಾಗಿ ನೂರು ನೂರು ಗುಣಗಳಿಂದ ಉತ್ತಮರಾಗಿರುವರು. ಬ್ರಹ್ಮದೇವರೂ ವಾಯುದೇವರೂ ಸಮಾನರು. ಗರುಡ, ರುದ್ರ, ಶೇಷ ಮೂವರೂ ಸಮಾನರು. ಆದರೆ, ವಾಯುದೇವರಿಗೆ ಸಮಾನರು ಬ್ರಹ್ಮನನ್ನು ಹೊರತು ಮುಕ್ತರಲ್ಲೂ ಯಾರೂ ಇಲ್ಲ. ವಾಯುದೇವರಿಗಿಂತ ಲಕ್ಷ್ಮೀದೇವಿಯು ಸಾವಿರ ಗುಣಗಳಿಂದ ಉತ್ತಮಳಾಗಿರುವಳು. ಆ ಲಕ್ಷ್ಮೀಗಿಂತ ಅನಂತ ಗುಣಗಳಿಂದ ಉತ್ತಮನಾಗಿದ್ದಾನೆ ಶ್ರೀಮನ್ನಾರಾಯಣನು. ಯಾವಾಗಲೂ ಉತ್ತಮನಾಗಿಯೇ ಇರುತ್ತಾನೆ. ಎಂದೆಂದಿಗೂ ಶ್ರೀ ವಿಷ್ಣುವಿಗೆ ಸಮಾನನು ಇಲ್ಲವೇ ಇಲ್ಲ.

ಇತ್ಯಾದಿ ವೇದವಾಕ್ಯಂ ವಿಷ್ಣೋರುತ್ಕರ್ಷಮೇವ ವಕ್ತ್ಯಲಂ ॥೭೫॥
ಇತ್ಯಾದಿ ರೀತಿಯಲ್ಲಿ ವೇದವಾಕ್ಯವು ವಿಷ್ಣುಸರ್ವೋತ್ತಮತ್ವವನ್ನು ಅತಿ ಚೆನ್ನಾಗಿ ಪ್ರತಿಪಾದಿಸುತ್ತದೆ.

ತಾತ್ಪರ್ಯಂ ಮಹದತ್ರೇತ್ಯುಕ್ತಂ
ಯೋ ಮಾಮಿತಿ ಸ್ವಯಂ ತೇನ ।
ಭೂಮ್ನೋ ಜ್ಯಾಯಸ್ತ್ವ ಮಿತ್ಯುಕ್ತಂ
ಸೂತ್ರೇಷು ನಿರ್ಣಯಾತ್ತೇನ ॥೭೬॥

ಶ್ರೀ ವಿಷ್ಣುವೇ ಕೃಷ್ಣರೂಪದಲ್ಲಿ ಈ ರೀತಿಯಾಗಿ "ಸಕಲ ವೇದಶಾಸ್ತ್ರಗಳಿಗೂ ವಿಷ್ಣುಸರ್ವೋತ್ತಮತ್ವದಲ್ಲೇ ಮಹಾತಾತ್ಪರ್ಯವಿದೆ" ಎಂಬುದಾಗಿ "ಯೋ ಮಾಮೇವಂ ಅಸಮ್ಮೂಡೋ " ಇತ್ಯಾದಿ ಗೀತಾವಾಕ್ಯಗಳಿಂದ ಹೇಳಿದ್ದಾನೆ. ಅದೇ ವಿಷಯವನ್ನೇ ವೇದವ್ಯಾಸರೂಪದಿಂದ ಬ್ರಹ್ಮಸೂತ್ರಗಳಿಂದಲೂ ನಿರ್ಣಯ ಮಾಡಿದ್ದಾರೆ. "ಓಂ ಜನ್ಮಾದ್ಯಸ್ಯ ಯತಃ ಓ" "ಓಂ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಓಂ" "ಓಂ ಅಕ್ಷರ ಮಂಬರಾಂತಧೃತೇಃ ಓಂ" "ಓಂ ಸರ್ವೋಪೇತಾಚತದ್ದರ್ಶನಾತ್ ಓಂ" ಇತ್ಯಾದಿ ಸೂತ್ರಗಳಲ್ಲಿ ಭಗವಂತನ ಸರ್ವಗುಣಗಳನ್ನು ವೇದಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ ಎಂಬುದನ್ನು ಹೇಳಿರುವವರು. ಈ ಎಲ್ಲ ಗುಣಗಳ ಮಧ್ಯದಲ್ಲಿ "ಭೂಮ" ಗುಣಕ್ಕೆ ಮುಖ್ಯವಾಗಿ ವೇದಪ್ರತಿಪಾದ್ಯತ್ವವನ್ನು ಹೇಳಿದ್ದಾರೆ.
ಶ್ರೀಹರಿಯ ಪ್ರೀತಿಯಿಂದಲೇ ಮುಕ್ತಿಯನ್ನು ಹೊಂದಲು ಸಾಧ್ಯ. ಬೇರೆ ಯಾವುದರಿಂದಲೂ (ಪ್ರವಚನಾದಿಗಳಿಂದಲೂ) ಮುಕ್ತಿಯನ್ನು ಹೊಂದಲು ಸಾಧ್ಯವಿಲ್ಲ.

ನಾಯಮಾತ್ಮಾ ಪ್ರವಚನೇನ ಲಭ್ಯಃ
ನ ಮೇಧಯಾ ನ ಬಹುನಾ ಶ್ರುತೇನ ।
ಯಮೈವೇಶ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾವಿವೃಣುತೇ ತನೂಂ ಸ್ವಾಮ್ ॥೭೭॥

ಈ ಭಗವಂತನು ಕೇವಲ (ಭಕ್ತಿರಹಿತ) ಪ್ರವಚನದಿಂದ ಸಿಗಲಾರ. ಮೇಧಾಶಕ್ತಿಯಿಂದಲೂ ಒಲಿಸಿಕೊಳ್ಳುವಂತಿಲ್ಲ. ಬಹಳ ಶಾಸ್ತ್ರ ಶ್ರವಣದಿಂದಲೂ ಆತನು ಸಿಗಲಾರ. ಯಾವಾತನನ್ನು ಭಕ್ತ್ಯಾದಿಗಳಿಂದ ಸಂತುಷ್ಟನಾಗಿ ಪರಮಾತ್ಮನು ತನ್ನವನೆಂದು ಸ್ವೀಕರಿಸುತ್ತಾನೋ (ಯಾರಿಗೆ ಪ್ರಸನ್ನನಾಗುತ್ತಾನೋ) ಅಂಥವನಿಗೆ ದೊರೆಯುತ್ತಾನೆ.
ಆ ಪುರುಷನಿಗೇ ತನ್ನ ಸುಂದರ ರೂಪವನ್ನು ಪ್ರಕಟಗೊಳಿಸುವನು. (ಅಂದರೆ ಹೃದಯಗುಹೆಯಲ್ಲಿ ತನ್ನ ರೂಪವನ್ನು ತೋರಿಸಿಕೊಳ್ಳುವನು.

ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ ।
ಮೋಕ್ಷೋ ಜ್ಞಾನಂ ಚ ಕ್ರಮಶೋ ಮುಕ್ತಿಗೋ ಭೋಗ ಏವ ಚ ॥೭೮॥
ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇತ್ ।

ಸರ್ವೇಷಾಂ ಚ ಹರಿರ್ನಿತ್ಯಂ ನಿಯಂತಾ ತದ್ವಶಾಃ ಪರೇ ॥೮೦॥

ಶ್ರೀವಿಷ್ಣುವೇ ಮುಕ್ತಿಯನ್ನು ಕೊಡುವವನು. ಈತನ ಆಜ್ಞೆಯಿಂದ ವಾಯುದೇವರೂ ಮುಕ್ತಿಯನ್ನು ನೀಡಬಲ್ಲರು. ಕ್ರಮವಾಗಿ ಉತ್ತಮರ ಪ್ರಸಾದದಿಂದ ಚಿಕ್ಕವರಿಗೆ ಮುಕ್ತಿ, ಜ್ಞಾನ, ಮುಕ್ತಿಯಲ್ಲಿ (ಭೋಗ) ಆನಂದಾನುಭವ. ದೊಡ್ಡವರ ಪ್ರಸಾದ (ಅನುಗ್ರಹ)ವಿಲ್ಲದೆ ಹೋದರೆ ಜ್ಞಾನ,ಮುಕ್ತಿ ಮೊದಲಾದವುಗಳು ಆಗಲಾರವು. ಶ್ರೀಹರಿಯೇ ಯಾವಾಗಲೂ ನಿಯಾಮಕನು. ಉಳಿದವರೆಲ್ಲರೂ ಶ್ರೀಹರಿಯ ಅಧೀನರು.

ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ ।
ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ಕಥಂಚನ ॥೮೧॥

ಮೋಕ್ಷಕ್ಕಾಗಿ ತಾರತಮ್ಯವನ್ನು ತಿಳಿದುಕೊಳ್ಳಬೇಕು. ಹಾಗೆಯೇ ಶ್ರೀಹರಿಯ ಸರ್ವೋತ್ತಮತ್ವವನ್ನು ತಿಳಿದುಕೊಳ್ಳಬೇಕು. ಈ ರೀತಿಯಾದ ತಾರತಮ್ಯಜ್ಞಾನ, ವಿಷ್ಣುಸರ್ವೋತ್ತಮತ್ವಜ್ಞಾನ ಇವುಗಳನ್ನು ಹೊರತು ಬೇರೆ ಯಾವ ಸಾಧನೆಯಿಂದಲೂ, ಯಾರಿಂದಲೂ ಮೋಕ್ಷವು ದೊರೆಯಲಾರದು.

ಪಂಚಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವ ಚ ।
ನಿರ್ದೋಷತ್ವಂ ಗುಣೋದ್ರೇಕಂ ಜ್ಞಾತ್ವಾ ಮುಕ್ತಿರ್ನಚಾನ್ಯಥಾ ॥೮೨॥

ಪಂಚಭೇದಗಳನ್ನು ತಿಳಿದುಕೊಂಡು, ಶ್ರೀವಿಷ್ಣುವಿನ ಅವಯುವಗಳಿಗೂ ಅವತಾರಗಳಿಗೂ ಪರಸ್ಪರ ಅಭೇದವನ್ನು ತಿಳಿದು, ಶ್ರೀವಿಷ್ಣುವಿಗೆ ಎಂದೆಂದಿಗೂ ದೋಷವೆಂಬುದು ಇಲ್ಲವೇ ಇಲ್ಲ ಎಂದು ತಿಳಿಯಬೇಕು. ಮಾತ್ರವಲ್ಲದೆ ಭಗವಂತನು ಸರ್ವಗುಣಪರಿಪೂರ್ಣನು ಎಂದು ತಿಳಿಯಬೇಕು. ಹೀಗೆ ತಿಳಿದರೇನೇ ಮುಕ್ತಿ. ಬೇರೆ ಯಾವ ರೀತಿಯಿಂದಲೂ ಮುಕ್ತಿಯು ದೊರೆಯಲಾರದು.

ಅವತಾರಾನ್ ಹರೇರ್ಜ್ಞಾತ್ವಾ ನಾವತಾರಾ ಹರೇಶ್ಚ ಯೇ ।
ತಾದಾವೇಶಾಂಸ್ತಥಾ ಸಮ್ಯಗ್ಜ್ಞಾತ್ವಾ ಮುಕ್ತಿರ್ನಚಾನ್ಯಥಾ ॥೮೩॥

ಭಗವಂತನ ಅವತಾರಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಯಾವುದು ಭಗವಂತನ ಅವತಾರವಲ್ಲವೋ ಅದನ್ನು ಭಗವಂತನ ಅವತಾರವಲ್ಲವೆಂದೇ ತಿಳಿಯಬೇಕು. ಯಾರು ಯಾರಲ್ಲಿ ಭಗವಂತನ ಆವೇಶವಿರುವುದೋ ಅದನ್ನೂ ಸರಿಯಾಗಿ ತಿಳಿದುಕೊಳ್ಳಬೇಕು. ಹೀಗೆ ತಿಳಿದರೆ ಮಾತ್ರ ಮುಕ್ತಿಯಾಗುತ್ತದೆ. ಇಲ್ಲದಿದ್ದ ರೆ ಮುಕ್ತಿಯಾಗಲಾರದು.

ಸೃಷ್ಟಿರಕ್ಷಾಹೃತಿಜ್ಞಾನ ನಿಯತ್ಯಜ್ಞಾನ ಬಂಧನಾತ್ (ನ್) ।

ಮೋಕ್ಷಂ ಚ ವಿಷ್ಣುತಸ್ತ್ವೇವ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ||೮೪||

ಸೃಷ್ಟಿ, ರಕ್ಷಣೆ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ- ಇವುಗಳೆಲ್ಲವೂ ವಿಷ್ಣುವಿನಿಂದಲೇ ಆಗುತ್ತದೆಂದು ತಿಳಿದರೇನೇ ಮೋಕ್ಷವಾಗುತ್ತದೆ. ಇಲ್ಲದಿದ್ದ ರೆ ಮುಕ್ತಿಯಿಲ್ಲ.

ವೇದಾಂತ ಪಂಚರಾತ್ರಾಣಿ ಸೇತಿಹಾಸ ಪುರಾಣಕಾನ್ ।
ಜ್ಞಾತ್ವಾ ವಿಷ್ಣುಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್ ||೮೫||

ಇತಿಹಾಸ ಮಹಾಭಾರತ, ರಾಮಾಯಣಗಳು ಪುರಾಣಗಳು ಇವಿಗಳಿಂದ ಸಹಿತವಾದ ಸಮಸ್ತ ವೇದಗಳು, ಹಾಗೂ ಪಂಚರಾತ್ರಗಳು ಇವುಗಳೆಲ್ಲವು ವಿಷ್ಣು ಪರವಾಗಿಯೇ ಇರುವುದು. ಈ ರೀತಿ ತಿಳಿದುಕೊಂಡರೇನೇ ಮೋಕ್ಷ. ಇಲ್ಲದಿದ್ದ ರೆ ಮೋಕ್ಷವೇಇಲ್ಲ.

ಮಾಹಾತ್ಮ್ಯ ಜ್ಞಾನ ಪುರ್ವಸ್ತು ಸುದೃಢಃ ಸರ್ವತೋಧಿಕಃ ।
ಸ್ನೇಹೋ ಭಕ್ತಿರಿತಿಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ||೮೬||

ಮಾಹಾತ್ಮ್ಯಜ್ಞಾನಪೂರ್ವಕವಾದ, ಎಲ್ಲದಕ್ಕಿಂತಲೂ ಅತ್ಯಧಿಕವಾದ ಸುದೃಢ ಸ್ನೇಹವೇ ಭಕ್ತಿಯು. ಇಂತಹ ಭಕ್ತಿಯಿಂದಲೇ ಮುಕ್ತಿ. ಬೇರೆ ಯಾವ ಮಾರ್ಗದಿಂದಲೂ ಮುಕ್ತಿಯಿಲ್ಲ.

ತ್ರಿವಿಧಾ ಜೀವಸಂಘಾಸ್ತು ದೇವಮಾನುಷದಾನವಾಃ ।
ತತ್ರದೇವಾಮುಕ್ತಿ ಯೋಗ್ಯಾ ಮಾನುಷೇಷೂತ್ತಮಾಸ್ತಥಾ ||೮೭||
ಮಧ್ಯಮಾ ಮಾನುಷಾ ಯೇತು ಸೃತಿಯೋಗ್ಯಾಃ ಸದೈವ ಹಿ ।
ಅಧಮಾ ನಿರಯಾಯೈವ ದಾನವಾಸ್ತು ತಮೋ ಲಯಾಃ ||೮೮||

ಜೀವರ ಸಮುದಾಯವು ಮೂರು ವಿಧದಲ್ಲಿರುವರು. ದೇವತೆಗಳು, ಮನುಷ್ಯರು, ದಾನವರು. ಇವರೇ ಆ ಮೂರು ವಿಧ ಜೀವರು. ಇವರಲ್ಲಿ ದೇವತೆಗಳು ಮತ್ತು ಮನುಷ್ಯೋತ್ತಮರು ಮುಕ್ತಿಯೋಗ್ಯರು. ಮಧ್ಯಮ ಮನುಷ್ಯರು ನಿತ್ಯಸಂಸಾರಿಗಳು. ಮನುಷ್ಯಾಧಮರು ತಮಸ್ಸನ್ನೂ , ದಾನವರು ಅಂಧಂ ತಮಸ್ಸನ್ನೂ ಹೊಂದುವರು.

ಮುಕ್ತಿರ್ನಿತ್ಯಾ ತಮಶ್ಚೈವ ನಾವೃತ್ತಿಃ ಪುನರೇತಯೋಃ ।
ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನ ||೮೯||
ನಾಸುರಾಣಾಂ ತಥಾ ಮುಕ್ತಿಃ ತಥಾಚಿತ್ಕೇನ ಚಿತ್ಕ್ವ ಚಿತ್
ಮಾನುಷಾಣಾಂ ಮಧ್ಯಮಾನಾಂ ನೈವೇತದ್ದ್ವಯಮಾಪ್ಯತೇ ||೯೦||

ಮೋಕ್ಷವು ನಿತ್ಯವಾದದ್ದು . ತಮಸ್ಸು ನಿತ್ಯವಾದದ್ದು . ಈ ಮೋಕ್ಷ, ತಮಸ್ಸು ಇವುಗಳನ್ನು ಹೊಂದಿರುವವರು ತಿರುಗಿ ಬರುವುದೇ ಇಲ್ಲ. ದೇವತೆಗಳಿಗೆ ನರಕವು ಇಲ್ಲ. ತಮಸ್ಸಂತೂ ಇಲ್ಲವೇ ಇಲ್ಲ. ಅಸುರರಿಗೆ ಯಾವ ಕಾರಣದಿಂದಲೂ ಮುಕ್ತಿಯು ದೊರೆಯುವುದಿಲ್ಲ.ಮಧ್ಯಮ ಮನುಷ್ಯರೋ ಮುಕ್ತಿಯನ್ನೂ ಹೊಂದುವುದಿಲ್ಲ. ತಮಸ್ಸನ್ನೂ ಹೊಂದುವುದಿಲ್ಲ.

ಅಸುರಾಣಾಂ ತಮಃಪ್ರಾಪ್ತಿಸ್ತದಾ ನಿಯಮತೋ ಭವೇತ್ ।
ಯದಾ ತು ಜ್ಞಾನಿ ಸದ್ಭಾವೇ ನೈವ ಗೃಹ್ಣಂತಿ ತತ್ಪರಮ್ ॥೯೧॥
ತದಾ ಮುಕ್ತಿರ್ಹಿ ದೇವಾನಾಂ ಯದಾ ಪ್ರತ್ಯಕ್ಷಗೋ ಹರಿಃ ।
ಸ್ವಯೋಗ್ಯಯೋಪಾಸನಯಾ ತನ್ವಾ ತದ್ಯೋಗ್ಯಯಾ ತಥಾ ॥೯೨॥

ಉತ್ತಮ ಜ್ಞಾನಿಗಳ ಉಪದೇಶವಿದ್ದರೂ ಯಾರು ವಿಷ್ಣುವನ್ನು ತಿಳಿದುಕೊಳ್ಳುವುದಿಲ್ಲವೋ(ಜ್ಞಾನದಲ್ಲಿ ವಿಶ್ವಾಸವಿಲ್ಲದೆ, ಜ್ಞಾನಿಗಳಲ್ಲಿ ಹಾಗೂ ವಿಷ್ಣುವಿನಲ್ಲಿ ದ್ವೇಷದಿಂದಿರುವರೋ) ಅವರು ಅಸುರರು. ಇಂಥವರಿಗೆ ನಿಯಮದಿಂದ ತಮಸ್ಸೇ ಆಗುತ್ತದೆ. ತಮ್ಮ ತಮ್ಮ ಯೋಗ್ಯ ಉಪಾಸನೆಯಿಂದ ಪ್ರಸನ್ನನಾಗಿ ತಮ್ಮ ಬಿಂಬ ರೂಪದಲ್ಲಿರುವ ಶ್ರೀಹರಿಯು ಯಾವಾಗ ಪ್ರತ್ಯಕ್ಷನಾಗುತ್ತಾನೋ ಆಗ ದೇವತೆಗಳಿಗೆ ಮುಕ್ತಿಯು ನಿಶ್ಚಯವು.

ಸರ್ವೈರ್ಗುಣೈರ್ಬ್ರಹ್ಮಣಾ ತು ಸಮುಪಾಸ್ಯೋ ಹರಿಃ ಸದಾ ।
ಆನಂದೋ ಜ್ಞಃ ಸದಾತ್ಮೇತಿ ಹ್ಯುಪಾಸ್ಯೋ ಮಾನುಷೈರ್ಹರಿಃ ॥೯೩॥

ಬ್ರಹ್ಮದೇವರು ಅನಂತ ವೇದಗಳಲ್ಲಿ ಹೇಳಲ್ಪಟ್ಟ ಗುಣಗಳಿಂದ ಶ್ರೀಹರಿಯನ್ನು ಉಪಾಸನೆ ಮಾಡುವರು. ಆದರೆ ಮನುಷ್ಯರು ಆನಂದ, ಜ್ಞಾನ, ಸತ್ (ನಿರ್ದೋಷ) ಸ್ವಾಮಿ, ಹೀಗೆ ನಾಲ್ಕು ಗುಣಗಳಿಂದ ಶ್ರೀಹರಿಯನ್ನು ಉಪಾಸನೆ ಮಾಡುವರು.

ಯಥಾಕ್ರಮಂ ಗುಣೋದ್ರೇಕಾತ್ತದನ್ಯೈರಾವಿರಿಂಚಿತಃ ।
ಬ್ರಹ್ಮತ್ವಯೋಗ್ಯಾ ಋಜವೋ ನಾಮ ದೇವಾಃ ಪೃಥಗ್ಗಣಾಃ ॥೯೪॥
ತೈರೇವಾಪ್ಯಂ ತತ್ಪದಂ ತು ನೈವಾನ್ಯೈಃ ಸಾಧನೈರಪಿ ।
ಏವಂ ಸರ್ವ ಪದಾನಾಂ ತು ಯೋಗ್ಯಾಃ ಸಂತಿ ಪೃಥಗ್ಗಣಾಃನಾಃ ॥೯೫॥

ಆ ಮನುಷ್ಯರಿಂದ ಇತರರಾದ ಋಷಿಗಳು, ಗಂಧರ್ವರು ಮೊದಲುಗೊಂಡು ಬ್ರಹ್ಮದೇವರವರೆಗಿನ ಎಲ್ಲರೂ ಕ್ರಮದಿಂದ ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿ ಹೆಚ್ಚೆಚ್ಚು ಗುಣಗಳಿಂದ ಭಗವಂತನನ್ನು ಆರಾಧಿಸುವರು. "ಋಜುಗಳು"

ಎಂಬ ಹೆಸರಿರುವ ಪ್ರತ್ಯೇಕ ದೇವತಾಗಣದವರು ಇರುವರು. ಇವರೇ ಬ್ರಹ್ಮಪದವಿಗೆ ಯೋಗ್ಯರು. ಬೇರಾರೂ ಯಾವ ಸಾಧನೆಯಿಂದಲೂ ಬ್ರಹ್ಮಪದವಿಯನ್ನು ಹೊಂದಲು ಆಗಲಾರದು. ಈ ರೀತಿ ಬ್ರಹ್ಮಪದವಿಯನ್ನು ಹೊಂದಲಿಕ್ಕಾಗಿಯೇ ಪ್ರತ್ಯೇಕ ಗಣವಿರುವಂತೆ ರುದ್ರ, ಇಂದ್ರ ಮೊದಲಾದ ಪದವಿಗಳನ್ನು ಹೊಂದಲಿಕ್ಕಾಗಿಯೇ ಪ್ರತ್ಯೇಕ ಪ್ರತ್ಯೇಕ ದೇವಗಣದವರು ಇರುತ್ತಾರೆ.

ತಸ್ಮಾದನಾದ್ಯನಂತಂ ತಾರತಮ್ಯಂ ಚಿದಾತ್ಮನಾಮ್ ।
ತಚ್ಚನೈವಾನ್ಯಥಾ ಕರ್ತುಂ ಶಕ್ಯಂ ಕೇನಾಪಿ ಕುತ್ರಚಿತ್ ॥೯೬॥

ಆದ್ದರಿಂದ ಚೇತನರ ತಾರತಮ್ಯವು ಅನಾದಿ ಕಾಲದಿಂದಲೇ ಇರುತ್ತದೆ. ಇದಕ್ಕೆ ಕೊನೆಯೇ ಇಲ್ಲ. ಈ ತಾರತಮ್ಯವನ್ನು ಯಾವ ದೇಶದಲ್ಲೂ, ಯಾವ ಕಾಲದಲ್ಲೂ, ಯಾರಿಂದಲೂ ನಾಶ ಮಾಡಲು ಶಕ್ಯವಿಲ್ಲ.

ಅಯೋಗಮಿಚ್ಛನ್ ಪುರುಷಃ ಪತತ್ಯೇವ ನ ಸಂಶಯಃ ।
ತಸ್ಮಾದ್ಯೋಗ್ಯಾನುಸಾರೇಣ ಸೇವ್ಯೋ ವಿಷ್ಣುಃ ಸದೈವ ಹಿ॥೯೭॥

ಅಯೋಗ್ಯವಾದ (ತನ್ನ ಯೋಗ್ಯತೆಗೆ ಮೀರಿದ) ಪದವಿಯನ್ನು (ಸ್ಥಾನವನ್ನು) ಇಚ್ಛಿಸಿದ ಪುರುಷನು ಅಧಃಪತನವನ್ನೇ ಹೊಂದುತ್ತಾನೆ.ಇದರಲ್ಲಿ ಯಾವ ಸಂಶಯವೂ ಇಲ್ಲ. ಆದ್ದರಿಂದ ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿ (ಸ್ಥಾನವನ್ನು, ಪುರುಷಾರ್ಥವನ್ನು ಪಡೆಯಲಿಕ್ಕಾಗಿ) ಸದಾ ಸರ್ವಕಾಲವೂ ಶ್ರೀವಿಷ್ಣುವನ್ನು ಸೇವಿಸುತ್ತಿರಬೇಕು.

ಅಚ್ಛಿದ್ರಸೇವನಾಚ್ಚೈವ ನಿಷ್ಕಾಮತ್ವಾಚ್ಚ ಯೋಗ್ಯತಃ ।
ದ್ರಷ್ಟುಂ ಶಕ್ಯೋ ಹರಿಃ ಸರ್ವೈರ್ನಾನ್ಯಥಾ ತು ಕಥಂಚನ ॥೯೮॥

ಎಡೆಬಿಡದ ಸೇವಾ(ಉಪಾಸನಾ) (ತೈಲಧಾರೆಯಂತೆ ಎಡೆಬಿಡದ ಧ್ಯಾನ), ನಿಷ್ಕಾಮಕರ್ಮ, ಯೋಗ್ಯತೆ ಅವಿಗಳಿಂದಲೇನೇ ಎಲ್ಲರೂ ಭಗವಂತನನ್ನು ನೋಡಲು ಶಕ್ತರಾಗುವರು. ಇವುಗಳಿಲ್ಲದೆ ಯಾರಿಂದಲೂ ಭಗವಂತನನ್ನು ನೋಡಲು ಶಕ್ಯವಿಲ್ಲ.

ನಿಯಮೋ ಯಂ ಹರೇರ್ಯಸ್ಮಾನ್ನೊಲ್ಲಂಘ್ಯಃ ಸರ್ವಚೇತನೈಃ ।
ಸತ್ಯಸಂಕಲ್ಪತೋ ವಿಷ್ಣುರ್ನಾನ್ಯಥಾ ತು ಕರಿಷ್ಯತಿ ॥೯೯॥

ಈ ರೀತಿಯಾದ (ಉಪಾಸನಾ ಕ್ರಮ, ತಾರತಮ್ಯ ಮೊದಲಾದ) ನಿಯಮಗಳು ಪರಮಾತ್ಮನ ಆಜ್ಞಾರೂಪದಲ್ಲಿರುವವು. ಅವನ ನಿಯಂತ್ರಣದಲ್ಲಿರುವುದು. ಇದನ್ನು

ಯಾರೂ ಉಲ್ಲಂಘನ ಮಾಡಬಾರದು. ಮಾಡಲು ಶಕ್ಯವೂ ಇಲ್ಲ. ಭಗವಂತನು ಸತ್ಯಸಂಕಲ್ಪ ಉಳ್ಳವನು (ಎಂದೆಂದೂ ಅತನ ಸಂಕಲ್ಪ ಸುಳ್ಳೇ ಆಗಲಾರದು). ತಾನು ಮಾಡಿದ ನಿಯಮವನ್ನು ಭಗವಂತನೂ ಕೂಡ ಎಂದೆಂದೂ ವ್ಯತ್ಯಾಸ ಮಾಡುವುದೇ ಇಲ್ಲ.

ದಾನತೀರ್ಥತಪೋಯಜ್ಞ ಪೂರ್ವಾಃ ಸರ್ವೇಽಪಿ ಸರ್ವದಾ ।
ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥೧೦೦॥
ಭವಿಷ್ಯತ್ ಪರ್ವವಚನಂ ಇತ್ಯೇತದಖಿಲಂ ಪರಮ್ ॥೧೦೧॥

ಉತ್ತಮ ದಾನ , ತೀರ್ಥಸ್ನಾನ, ಕೃಚ್ಛ್ರ ಚಾಂದ್ರಾಯಣಾದಿ ವ್ರತ, ತಪಸ್ಸು, ಅಶ್ವಮೇಧಾದಿ ಯಜ್ಞಗಳು ಇವುಗಳೆಲ್ಲವೂ ಭಗವಂತನ ಸೇವೆಯ ಅಂಗಗಳು. ಭಕ್ತಿಯೊಂದೇ ಮುಖ್ಯವಾಗಿ ಮುಕ್ತಿಗೆ ಕಾರಣ. (ಹಿಂದೆ ಹೇಳಿದ ದಾನ, ತೀರ್ಥಸ್ನಾನಾದಿಗಳು ದೃಢವಾದ ಭಕ್ತಿ ಬರಲಿಕ್ಕೆ, ಧ್ಯಾನ ಮಾಡಲಿಕ್ಕೆ ಸಾಧನಗಳು, ಭಕ್ತಿಯ ಅಂಗಗಳು) ಈ ವಚನವು ಭವಿಷ್ಯತ್ ಪರ್ವದಲ್ಲಿ ಇದೆ.

ಶೃಣ್ವೆ ವೀರ ಉಗ್ರಮುಗ್ರಂ ದಮಾಯನ್ ।
ಅನ್ಯಮನ್ಯಮತಿ ನೇನೀಯ ಮಾನಃ ॥
ಏಧಮಾನದ್ವಿಳುಭಯಸ್ಯ ರಾಜಾ ।
ಚೋಷ್ಕೂಯತೇ ವಿಶ ಇಂದ್ರೋ ಮನುಷ್ಯಾನ್ ॥೧೦೨॥

ವೀರನಾದ (ಆರಂಭಿಸಿದ ಕಾರ್ಯವನ್ನು ಕೊನೆಯವರೆಗೂ ಮಾಡಿ ಮುಗಿಸುವ) ಶ್ರೀಪರಮಾತ್ಮನು ಲೋಕಕ್ಕೆ ಉಪದ್ರವವನ್ನು ಕೊಡುವ ಅತ್ಯುಗ್ರರಾದ ದೈತ್ಯರಾಕ್ಷಸರ ಸಮುದಾಯವನ್ನು ಅಂಧಂತಮಸ್ಸಿಗೆ ಹಾಕಿ ಶಿಕ್ಷಿಸುತ್ತಾನೆ. ಅವರಿಂದ ಇತರರದ ಶಮದಮಾದಿ ಸಂಪನ್ನರಾದ ಬ್ರಹ್ಮ ಮೊದಲಾದ ಸಜ್ಜನರ ಸಮೂಹವನ್ನು ಅತಿಶಯವಾದ ವೈಕುಂಠಾದಿಗಳನ್ನು ಹೊಂದುವಂತೆ ಮಾಡುತ್ತಾನೆ. ಈ ರೀತಿ (ವೇದಗಳಿಂದ) ಕೇಳಲ್ಪಡುತ್ತದೆ. ದೇವತೆಗಳ ಸಮುದಾಯಕ್ಕೂ, ನಿಯಾಮಕನಾದ ಭಗವಂತನು ದೇವತೆಯೇ ಆಗಿರಲಿ, ಅಸುರರೇ ಆಗಿರಲಿ ತಮ್ಮ ತಮ್ಮ ಯೋಗ್ಯತೆ ಮೀರಿದ ಸ್ಥಾನವನ್ನು ಹೊಂದಲು ಬಿಡಲಾರ. (ಅವರ ಅಧಃಪತನಕ್ಕೆ ಕಾರಣವಾದ ಯೋಗ್ಯತೆ ಮೀರಿದ ಪುಣ್ಯವನ್ನು ನಾಶ ಮಾಡಿಬಿಡುತ್ತಾನೆ) ಮಧ್ಯಮ ಮನುಷ್ಯರನ್ನು ನಿತ್ಯಸಂಸಾರದಲ್ಲಿ ಇಡುತ್ತಾನೆ.

ಪರಾ ಪೂರ್ವೇಷಾಂ ಸಖ್ಯಾಂವೃಣಕ್ತಿ ವಿತರ್ತುರಾಣೋ ಅಪರೇಭಿರೇತಿ ।
ಅನಾನುಭೂತೀರವಧೂನ್ವಾನಃ ಪೂರ್ವೀರಿಂದ್ರಃ ಶರದಸ್ತರ್ತರೀತಿ ॥೧೦೩॥

ಈ ಪರಮಾತ್ಮನು ಕ್ರೂರ ದೈತ್ಯರ ಸ್ನೇಹವನ್ನು ದೂರದಿಂದಲೇ ಪರಿತ್ಯಾಗ ಮಡುತ್ತಾನೆ. ಆದ್ದರಿಂದಲೇ ಅವರಿಗೆ ಉತ್ತಮ ಲೋಕವಿಲ್ಲವೇ ಇಲ್ಲ. ವಿಶೇಷವಾಗಿ ವೇಗವುಳ್ಳ ಇತರರಾದ ದೇವತೆಗಳಲ್ಲಿ ಸ್ನೇಹ ಹೊಂದುತ್ತಾನೆ. ಅತಿಕ್ರೂರರೂ, ಜ್ಞಾನರಹಿತರೂ, ಭಗವದ್ವೇಷಿಗಳೂ ಆಗಿರುವ ಅಸುರಾದಿಗಳನ್ನು ಅಧೋಲೋಕವಾದ ತಮಸ್ಸಿನಲ್ಲಿ ಹಾಕುವ ಈ ಪರಮಾತ್ಮನು ಹಿಂದಿನ ಸಂವತ್ಸರಗಳನ್ನು ಕಳೆದು (ದಾಟಿ) ಈಗಿನ ಸಂವತ್ಸರಗಳನ್ನು ದಾಟುತ್ತಾ (ಕಳೆಯುತ್ತಾ) ಮುಂದಿನ ಸಂವತ್ಸರಗಳನ್ನು ಕಳೆಯುತ್ತಾನೆ (ದಾಟುವನು). (ಮೂರು ಕಾಲದಲ್ಲೂ ಒಂದೇ ರೀತಿ ವ್ಯಾಪಾರವನ್ನು ಮಾಡುವನು.)

ತಮೇವಂ ವಿದ್ವಾನಮೃತ ಇಹ ಭವತಿನಾನ್ಯಃ ಪಂಥಾ ಅಯನಾಯ ವಿದ್ಯತೇ ।
ತಮೇವಂ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇ ಅಯನಾಯ ॥೧೦೪॥

ಈ ರೀತಿಯಾಗಿ (ಪುರುಷಸೂಕ್ತದಲ್ಲಿ ಹೇಳಿದಂತೆ) ಭಗವಂತನನ್ನು ತಿಳಿದುಕೊಂಡವನೇ ಮುಕ್ತಿಯನ್ನು ಹೊಂದುತ್ತಾನೆ. ಆ ಮುಕ್ತಿಗೆ ಬೇರೆ ಮಾರ್ಗವಿಲ್ಲ. ಆಪರಮಾತ್ಮನು ಈ ರೀತಿ ತಿಳಿದುಕೊಂಡು ಮೃತ್ಯುವನ್ನು ಅತಿಕ್ರಮಿಸಿರುವ ಮೋಕ್ಷವನ್ನು ಹೊಂದುತ್ತಾನೆ.(ಈ ರೀತಿ ಭಗವಂತನ ಜ್ಞಾನವನ್ನು ಹೊರತು), ಮೋಕ್ಷಕ್ಕೆ ಬೇರೆ ಮಾರ್ಗವಿಲ್ಲ.

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾಗುರೌ ।
ತಸ್ಯೈತೇ ಕಥಿತಾಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥೧೦೫॥

ಯಾವಾತನಿಗೆ ಶ್ರೀಹರಿಯಲ್ಲಿ ಉತ್ಕೃಷ್ಟವಾದ ಭಕ್ತಿಯಿರುವುದೋ, ಬ್ರಹ್ಮಾದಿ ದೇವತೆಗಳಲ್ಲಿ ಯೋಗ್ಯತಾನುಸಾರವಾಗಿ ಭಕ್ತಿಯಿರುವುದೋ, ಅಂತಹ ಮಹಾನುಭಾವನಿಗೆ (ವೇದಗಳಲ್ಲಿ) ಹೇಳಲ್ಪಟ್ಟ ಅರ್ಥಗಳು ಪ್ರಕಾಶಿಸುತ್ತವೆ. (ಸ್ಫೂರ್ತಿಗೆ ಬರುತ್ತವೆ.)

ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿರ್ಮೋಕ್ಷಾಯ ಕೇವಲಾ
ಮುಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದಸ್ವರೂಪಿಣೀ ॥೧೦೬॥

ದಾನ, ಜಪ, ತಪಾನುಷ್ಠಾನಾದಿಗಳು ಭಕ್ತಿಯನ್ನು ಹೊಂದಲಿಕ್ಕಾಗಿಯೇ, ಭಕ್ತಿಯಿರುವುದೋ ಕೇವಲ ಮೋಕ್ಷಕ್ಕಾಗಿಯೇ. ಈ ಭಕ್ತಿಯು ಮುಕ್ತರಿಗೂ ನಿತ್ಯಾನಂದಸ್ವರೂಪವಾಗಿಯೇ ಈ ಭಕ್ತಿಯು ಮುಕ್ತರಲ್ಲಿರುವುದು.

ಜ್ಞಾನಪೂರ್ವಃ ಪರಃ ಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ ।
ಇತ್ಯಾದಿ ವೇದವಚನಂ ಸಾಧನಂ ಪ್ರವಿಧಾಯಕಮ್ ॥೧೦೭॥

ಮಾಹಾತ್ಮ್ಯ ಜ್ಞಾನಪೂರ್ವಕವಾದ ಹಾಗೂ ಉತ್ತಮವಾದ, ಸುದೃಢ ಸ್ನೇಹವೇ ಭಕ್ತಿ

ಎಂದು ಅನಿಸಲ್ಪಡುತ್ತದೆ. ಈ ರೀತಿಯಾಗಿ ವೇದವಚನವು ಭಕ್ತ್ಯಾದಿ ಸಾಧನವನ್ನು ವಿಧಾನ ಮಾಡುತ್ತದೆ.

ನಿಃಶೇಷಧರ್ಮಕರ್ತಾಪ್ಯ ಭಕ್ತಸ್ತೇ ನರಕೇ ಹರೇ ।
ಸದಾ ತಿಷ್ಠತಿ ಭಕ್ತಶ್ಚೇದ್ಬ್ರ ಹ್ಮಹಾಪಿ ವಿಮುಚ್ಯತೇ ॥೧೦೮॥

ಭಗವಂತ ! ನಿನ್ನಲ್ಲಿ ಭಕ್ತಿಯಿಲ್ಲದೆ ಪರಿಪೂರ್ಣವಾದ ಧರ್ಮಗಳನ್ನು ಮಾಡಿದರೂ ಆತನು ನರಕದಲ್ಲೇ ಬಿದ್ದಿರುತ್ತಾನೆ. ಯಾರು ನಿನ್ನಲ್ಲಿ ಸದಾ ಸರ್ವಕಾಲವೂ ಭಕ್ತಿಯನ್ನು ಹೊಂದಿರುವರೋ ಆತನು ಬ್ರಹ್ಮಹತ್ಯೆಯನ್ನೇ ಮಾಡಿರಲಿ ಆ ಭಕ್ತಿಯ ಪ್ರಭಾವದಿಂದ ಮುಕ್ತನಾಗುತ್ತಾನೆ.

ಧರ್ಮೋ ಭವತ್ಯ ಧರ್ಮೋ ಪಿ ಕೃತೋಭಕ್ತೈ ಸ್ತವಾಚ್ಯುತ ।
ಪಾಪಂ ಭವತಿಧರ್ಮೋಪಿ ಯೋನ ಭಕ್ತ್ಯೈ ಕೃತೋಹರೇ ॥೧೦೯॥

ವಿನಾಶರಹಿತನಾದ ಶ್ರೀಹರೇ ! ನಿನ್ನ ಭಕ್ತರಿಂದ ಮಾಡಲ್ಪಟ್ಟ ಅಧರ್ಮ ಕೆಲಸವೂ ಕೂಡ ಧರ್ಮವೇ ಆಗುತ್ತದೆ.ನಿನ್ನಲ್ಲಿ ಭಕ್ತರಹಿತರು ಮಾಡುವ ಧರ್ಮ ಕೆಲಸವೂ ಕೂಡ ಅಧರ್ಮವೇ ಆಗುತ್ತದೆ; ಪಾಪದಾಯಕವೇ ಆಗಿರುತ್ತದೆ.

ಭಕ್ತ್ಯಾ ತ್ವನನ್ಯ ಯಾ ಶಕ್ಯ ಅಹಮೇವಂ ವಿಧೋರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ ॥೧೧೦॥

ಶತ್ರುಗಳಿಗೆ ಸಂತಾಪವನ್ನು ನೀಡುವ ಓ ಅರ್ಜುನ ! ವಿಶ್ವರೂಪದಿಂದ ಇರುವ ನನ್ನನ್ನು ಅನನ್ಯವಾದ ಭಕ್ತಿಯಿಂದಲೇ ತಿಳಿಯಲಿಕ್ಕಾಗಲೀ ನೋಡಲಿಕ್ಕಾಗಲೀ, ಮುಕ್ತಿಯಲ್ಲಿ ಪ್ರವೇಶಿಸಲಿಕ್ಕಾಗಲೀ ಆಗುತ್ತದೆ.

ಅನಾದಿದ್ವೇಷಿಣೋ ದೈತ್ಯಾ ವಿಷ್ಣೌ ದ್ವೇಷೋ ವಿವರ್ಧಿತಃ ।
ಪತಿತಾನಾಂ ತಮಸ್ಯಂದೇ ನಿಃಶೇಚಸುಖವರ್ಜಿತೇ ॥೧೧೧॥

ದೈತ್ಯರು ಅನಾದಿಕಾಲದಿಂದಲೂ ವಿಷ್ಣುವಿನಲ್ಲೀ (ವಿಷ್ಣುಭಕ್ತರಲ್ಲೂ) ದ್ವೇಷ ಉಳ್ಳವರು. ವಿಷ್ಣುವಿನಲ್ಲಿ ದ್ವೇಷವು ಅವರಿಗೆ ಬಹಳ ಅಭಿವೃದ್ಧಿ ಯಾಗಿರುತ್ತದೆ. ವಿಷ್ಣುವಿನಲ್ಲಿರುವ ಈ ರೀತಿಯಾದ ದ್ವೇಷವೇ ಅವರನ್ನು ನಿಶ್ಚಯವಾಗಿಯೇ ಅಂಧಂತಮಸ್ಸಿಗೆ ಬೀಳಿಸುತ್ತದೆ.

ಪೂರ್ಣದುಃಖಾತ್ಮಕೋ ಸೋನಂತೋ ಹ್ಯವತಿಷ್ಠತೇ ।

ಪತಿತಾನಾಂ ತಮಸ್ಯಂದೇ ನಿಃಶೇಷಸುಖವರ್ಜಿತೇ ॥೧೧೨॥

ಆ ದ್ವೇಷವು ಪೂರ್ಣ ದುಃಖಾತ್ಮಕರೂಪವಾಗಿರುವುದು. ನಿತ್ಯವಾದ ಆ ದ್ವೇಷವು ಸ್ವಲ್ಪವೂ ಸುಖದ ಸಂಬಂಧವಿಲ್ಲದಿರುವ ಅಂಧಂತಮಸ್ಸಿನಲ್ಲಿ ಬಿದ್ದಿ ರುವ ಅಸುರರಿಗೂ ಇದ್ದೇ ಇರುತ್ತದೆ.

ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ ।
ಸಾಮ್ಯಾಧಿಕ್ಯೋ ತದನ್ಯೇಷಾಂ ಭೇದಸ್ತದ್ಗತ ಏವ ಚ ॥೧೧೩॥
ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇ ಖಿಲಾ ಮತಾಃ ॥೧೧೪॥

ಅಂಧಂತಮಸ್ಸಿಗೆ ಕಾರಣವಾದ ಒಂಭತ್ತು ವಿಧ ದ್ವೇಷಗಳಿವೆ. ಜೀವರಿಗೂ, ಪರಮಾತ್ಮನಿಗೂ ಅಭೇದವನ್ನು ತಿಳಿಯುವುದು ಮೊದಲ ದ್ವೇಷ. ಭಗವಂತನಿಗೆ ಗುಣವೇ ಇಲ್ಲ. ನಿರ್ಗುಣ ಎಂದು ತಿಳಿಯುವುದು ಎರಡನೇ ದ್ವೇಷ. ದೇವರಿಗೆ ಪೂರ್ಣಗುಣಗಳಿಲ್ಲ(ಎಂಟೇ ಗುಣ, ಇಪ್ಪತ್ತನಾಲ್ಕು ಗುಣ) ಎಂದೆಲ್ಲ ಹೇಲುವುದು ಮೂರನೇ ದ್ವೇಷ. "ಶ್ರೀಹರಿಗೂ, ಬ್ರಹ್ಮರುದ್ರಾದಿಗಳಿಗೂ ಸಾಮ್ಯವಿದೆ" ಎಂದು ತಿಳಿಯುವುದೂ ನಾಲ್ಕನೇ ವಿಧ ದ್ವೇಷ. (ಅಂದರೆ ಬ್ರಹ್ಮ , ರುದ್ರ, ವಿಷ್ಣು ಮೂವರೂ ಸಮಾನರೇ ಎಂದು ತಿಳಿಯುವುದೆಂದರ್ಥ). ಬ್ರಹ್ಮರುದ್ರಾದಿಗಳು ವಿಷ್ಣುವಿಗಿಂತ ಅಧಿಕರು ಎಂದು ತಿಳಿಯುವುದು ಐದನೇ ದ್ವೇಷ. ಭಗವಂತನ ಅವತಾರಗಳಿಗೂ ಹಾಗೂ ಅವಯುವಗಳಿಗೂ ಭೇದವಿದೆ ಎಂದು ತಿಳಿಯುವುದು ಆರನೇ ದ್ವೇಷ. (ಅಂದರೆ ರಾಮನು, ಕೃಷ್ಣನು ಬೇರೆ ಇತ್ಯಾದಿ ತಿಳಿಯುವುದು.)
ಯಾವುದು ದೇವರ ಅವತಾರವೋ ಅದನ್ನು ದೇವರಲ್ಲವೆಂದು ಹೇಳುವುದು, ಯಾವುದು ದೇವರ ಅವತಾರವಲ್ಲವೋ ಅದನ್ನು ದೇವರ ಅವತಾರವೆಂದು ತಿಳಿಯುವುದು–ಇದು ಏಳನೇ ವಿಧ ದ್ವೇಷವು. (ಅಂದರೆ ದೇವರ ಅವತಾರವಾದ ವೇದವ್ಯಾಸರನ್ನು ದೇವರಲ್ಲ ಎಂದು ತಿಳಿಯುವುದು. ದೇವರ ಅವತಾರವಲ್ಲದ ಬಲರಾಮ, ಪೃಥು ಮೊದಲಾದವರನ್ನು ದೇವರೆಂದು ತಿಳಿದುಕೊಳ್ಳುವುದು. ಇದೂ ಕೂಡ ದೇವರಲ್ಲಿ ದ್ವೇಷ ಮಾಡಿದಂತೆಯೇ.)ಭಗವಂತನ
ಭಕ್ತರಲ್ಲಿ ದ್ವೇಷ ಮಾಡುವುದೂ ಕೂಡ ದ್ವೇಷ ಮಾಡಿದ್ದ ಕ್ಕೆ ಸಮಾನ. ಇದು ಎಂಟನೇ ದ್ವೇಷ. ಆ ಭಗವಂತನ ಗುಣಗಳನ್ನು ಪ್ರತಿಪಾದಿಸುವ ವೇದಶಾಸ್ತ್ರಾದಿ ಪ್ರಮಾಣಗಳನ್ನು ನಿಂದಾ ಮಾಡುವುದೂ ಭಗವಂತನಲ್ಲಿ ದ್ವೇಷ ಮಾಡಿದ್ದ ಕ್ಕೆ ಸಮಾನ. ಇದು ಒಂಭತ್ತನೇ ದ್ವೇಷ. ಈ ರೀತಿಯಾಗಿ ಮೇಲೆ ಹೇಳಿದ "ಜೀವಾಭೇದ, ತಿಳಿದುಕೊಳ್ಳುವುದೇ ಮೊದಲಾದ ಒಂಭತ್ತು ಕಾರ್ಯಗಳೂ ಭಗವಂತನ ದ್ವೇಷಗಳೆಂದು ಜ್ಞಾನಿಗಳಿಗೆ ಸಮ್ಮತವಾಗಿರುವವು.
(ಜ್ಞಾನಿಗಳ ಅಭಿಪ್ರಾಯ)

ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ ।
ಅನಾದಿಭಕ್ತಿರ್ದೇವಾನಾಮ ಕ್ರಮಾದ್ವೃದ್ಧಿಂ ಗತೈವ ಸಾ ॥೧೧೫॥
ಅಪರೋಕ್ಷದೃಶೇರ್ಹೇತುರ್ಮುಕ್ತಿಹೇತುಶ್ಚ ಸಾ ಪುನಃ
ಸೈವಾನಂದ ಸ್ವರೂಪೇಣ ನಿತ್ಯಾ ಮುಕ್ತೇಷು ತಿಷ್ಠತಿ ॥೧೧೬॥
ಯಥಾ ಶೌಕ್ಲ್ಯಾದಿಕಂ ರೂಪಂ ಗೋರ್ಭವತ್ಯೇವ ಸರ್ವದಾ ।
ಸುಖಜ್ಞಾನಾದಿಕಂ ರೂಪಮೇವಂ ಭಕ್ತೇರ್ನ ಚಾನ್ಯಥಾ ॥೧೧೭॥

ಈ ಮೇಲೆ ಹೇಳಿದ ಒಂಭತ್ತು ವಿಧ ದ್ವೇಷಗಳಿಂದ ರಹಿತವಾದ ಭಕ್ತಿಯೇ ಸರಿಯಾದ ಭಕ್ತಿಯು. ಇಂಥ ಭಕ್ತಿಯು ದೇವತೆಗಳಿಗೆ ಅನಾದಿಯಾಗಿರುತ್ತದೆ. ಕ್ರಮದಿಂದ ಅಭಿವೃದ್ಧಿ ಹೊಂದಿದ ಆ ಭಕ್ತಿಯು ಅಪರೋಕ್ಷಜ್ಞಾನಕ್ಕೆ ಕಾರಣವಾಗುತ್ತದೆ. ನಂತರ ಪುನಃ ಅಭಿವೃದ್ಧಿ ಹೊಂದಿದ ಭಕ್ತಿಯು ಮುಕ್ತಿಗೂ ಕಾರಣವಾಗುವುದು. ಅದೇ ಭಕ್ತಿಯೇ ಮೋಕ್ಷದಲ್ಲಿ ಆನಂದಸ್ವರೂಪದಿಂದ ಇರುತ್ತದೆ. ಹೇಗೆ ಬಿಳಿ ಮೊದಲಾದ ಬಣ್ಣಗಳು ಗೋವಿನ ಸ್ವರೂಪವಾಗಿರುತ್ತದೋ ಹಾಗೆಯೇ ಜ್ಞಾನಾದಿಗಳು ಭಕ್ತಿಯ ಸ್ವರೂಪವಾಗಿರುತ್ತದೆ.

ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ ।
ಸ ಏವ ಮುಕ್ತಿದಾತಾ ಚ ಭಕ್ತಿಸ್ತತ್ರೈವ ಕಾರಣಮ್ ॥೧೧೮॥
ಬ್ರಹ್ಮಾದೀನಾಂ ಚ ಮುಕ್ತಾನಾಂ ತಾರತಮ್ಯೇತು ಕಾರಣಮ್ ।
ತಾರತಮ್ಯಸ್ಥಿತಾನಾದಿರ್ನಿತ್ಯಾ ಭಕ್ತಿರ್ನ ಚೇತರತ್ ॥೧೧೯॥

ಶ್ರೀ ಹರಿಯು ಭಕ್ತಿಯಿಂದಲೇ ಸಂತೋಷವನ್ನು ಹೊಂದುವವನು. ಬೇರೆ ಯಾವ ಸಾಧನೆಯಿಂದಲೂ ಸಂತೋಷ ಹೊಂದುವವನಲ್ಲ. ಈತನೇ ಮುಕ್ತಿಯನ್ನು ಕೊಡುವವನು. ಈ ಮುಕ್ತಿಗೆ ಭಕ್ತಿಯೇ ಮುಖ್ಯ ಕಾರಣ. ಅನಾದಿ ನಿತ್ಯವಾದ ಈ ಭಕ್ತಿಯೇ ಮುಕ್ತಿಯಲ್ಲಿ ಬ್ರಹ್ಮಾದಿಗಳ ತಾರತಮ್ಯಕ್ಕೆ ಕಾರಣವಾಗಿದೆ. (ದೊಡ್ಡವರು, ಚಿಕ್ಕವರು ಎಂಬ ಭಾವನೆಗೆ ಕಾರಣವಾಗಿವೆ.) ಈ ಭಕ್ತಿ ಹೊರತು ಬೇರಾವುದೂ ತಾರತಮ್ಯಕ್ಕೆ ಕಾರಣೀಭೂತವಾದದ್ದಿಲ್ಲ.

ಮಾನುಷೇಷ್ವಧಮಾಃ ಕಿಂಚಿತ್ ದ್ವೇಷಯುಕ್ತಾಃ ಸದಾಹರೌ ।
ದುಃಖನಿಷ್ಠಾಸ್ತತಸ್ತೇಪಿ ನಿತ್ಯಮೇವ ನ ಸಂಶಯಃ ॥೧೨೦॥

ಮನುಷ್ಯರಲ್ಲಿ ಅಧಮರಾದವರು ಅಸುರರಿಗಿಂತ ಸ್ವಲ್ಪ ಕಡಿಮೆ ದ್ವೇಷವನ್ನು ಶ್ರೀ ಹರಿಯಲ್ಲಿ ಮಾಡುವರು. ಹೀಗೆ ದ್ವೇಷವನ್ನು ಶ್ರೀಹರಿಯಲ್ಲಿ ಮಾಡುತ್ತಿರುವುದರಿಂದ ಇವರೂ ನಿತ್ಯದಲ್ಲೂ ನರಕದುಃಖವನ್ನೇ ಹೊಂದುತ್ತಾರೆ. ಇದರಲ್ಲಿ ಯಾವ ಸಂಶಯವೂ

ಇಲ್ಲ.

ಮಧ್ಯಮಾ ಮಿಶ್ರಭೂತತ್ವಾನ್ನಿ ತ್ಯಂ ಮಿಶ್ರಫಲಾಃ ಸ್ಮೃತಾಃ ।
ಕಿಂಚಿದ್ಭಕ್ತಿಯುತಾ ನಿತ್ಯಮುತ್ತಮಾಸ್ತೇನ ಮೋಕ್ಷಿಣಃ ॥೧೨೧॥

ಮಧ್ಯಮ ಮನುಷ್ಯರು ಶ್ರೀವಿಷ್ಣುಸರ್ವೋತ್ತಮತ್ವಾದಿ ವಿಷಯದಲ್ಲಿ ಸಂಶಯವುಳ್ಳವರಾಗಿರುವ ಕಾರಣ ನಿತ್ಯದಲ್ಲೂ ಮಿಶ್ರವಾದ (ಅಂದರೆ ಸುಖ–ದುಃಖಾತ್ಮಕವಾದ ಮಿಶ್ರ) ಫಲವುಳ್ಳವರಾಗಿರುವರು. ಮನುಷ್ಯೋತ್ತಮರು ನಿತ್ಯದಲ್ಲೂ ದೇವತೆಗಳು ಭಗವಂತನಲ್ಲಿ ಭಕ್ತಿಮಾಡುವುದಕ್ಕಿಂತ ಸ್ವಲ್ಪ ಕಡಿಮೆಯಾಗಿ ಭಕ್ತಿ ಮಾಡುವವರು. ಹೀಗೆ ಅವರು ಭಕ್ತಿಯಿಂದ ಕೂಡಿರುವುದರಿಂದ ಅವರು ಮುಕ್ತಿಯನ್ನು ಹೊಂದುವರು.

ಬ್ರಹ್ಮಣಃ ಪರಮಾ ಭಕ್ತಿಃ ಸರ್ವೇಭ್ಯಃ ಪರಮಸ್ತತಃ ।
ಇತ್ಯಾದೀನಿ ಚ ವಕ್ಯಾನಿ ಪುರಾಣೇಷು ಪೃಥಕ್ ಪೃಥಕ್ ॥೧೨೨॥

ಚತುರ್ಮುಖ ಬ್ರಹ್ಮದೇವರಿಗೆ ಎಲ್ಲರಿಗಿಂತಲೂ ಉತ್ಕೃಷ್ಟವಾದ ಭಕ್ತಿಯು ಇದೆ. ಈ ರೀತಿ ಎಲ್ಲರಿಗಿಂತಲೂ ಉತ್ತಮ ಹೆಚ್ಚಿಗೆ ಪರಮ ಭಕ್ತಿಯು ಬ್ರಹ್ಮದೇವರಿಗೆ ಇರುವುದರಿಂದಲೇ ಅವರು ಎಲ್ಲಾ ಜೀವರಿಗಿಂತಲೂ ಉತ್ತಮರಾಗಿರುತ್ತಾರೆ.

ಷಣ್ಣವತ್ಯಂಗುಲೋ ನ್ಯಗ್ರೋಧ ಪರಿಮಂಡಲಃ ।
ಸಪ್ತಪಾದಶ್ಚತುರ್ಹಸ್ತೋ ದ್ವಾತ್ರಿಂ ಶಲ್ಲಕ್ಷಣೈರ್ಯುತಃ ॥೧೨೩॥
ಅಸಂಶಯಃ ಸಂಶಯಚ್ಛಿದ್ಗುರುರುಕ್ತೋ ಮನೀಷಿಭಿಃ ।
ತಸ್ಮಾದ್ಬ್ರಹ್ಮಾ ಗುರುರ್ಮುಖ್ಯ?ಃ ಸರ್ವೇಷಾಮೇವ ಸರ್ವದಾ॥೧೨೪॥

ಉತ್ತಮ ಗುರುವಾದವನು ಮೂವತ್ತೆರಡು ಲಕ್ಷಣವುಳ್ಳವನಾಗಿರಬೇಕು. ಅವನ ಎತ್ತರ ತೊಂಬತ್ತಾರು ಅಂಗುಲ (ಎಂಟು ಅಡಿ)ವಿರಬೇಕು. ಉದರದ ಸುತ್ತಮುತ್ತಲೂ ನಲ್ವತ್ತೆಂಟು ಅಂಗುಲಗಳು ಮಂಡಲಾಕಾರವಾಗಿರಬೇಕು. ಇದೇ ಪರಿಮಾಣ ಆತನ ಏಳು ಹೆಜ್ಜೆಗೆ ಸರಿಯಾಗಬೇಕು. ಹಾಗೂ ನಾಲ್ಕು ಮೊಳಗಳು (ಎಂಟು ಗೇಣು) ಇರಬೇಕು.
ಶಾಸ್ತ್ರ ವಿಷಯದಲ್ಲಿ ಅವನಿಗೆ ಯಾವ ರೀತಿಯ ಸಂಶಯವೂ ಇರಬಾರದು. ಇತರರ ಸಂಶಯವನ್ನು ಪರಿಹರಿಸುವವನಾಗಿರಬೇಕು. ಇಂತವನನ್ನೇ ಜ್ಞಾನಿಗಳು ಉತ್ತಮ ಗುರುವೆಂದು ಹೇಳುವರು.ಇಂತಹ ಸಕಲ ಲಕ್ಷಣಗಳುಳ್ಳ ಬ್ರಹ್ಮದೇವರೇ ಮುಖ್ಯಗುರುಗಳು, ಉತ್ತಮಗುರುಗಳು,ಎಲ್ಲರಿಗೂ ಗುರುಗಳು.

ಅನ್ಯೇ ಪಿ ಸ್ವಾತ್ಮನೋ ಮುಖ್ಯಾಃ ಕ್ರಮಾದ್ಗುರವ ಈರಿತಾಃ ।
ಕ್ರಮಾಲ್ಲಕ್ಷಣಹೀನಾಶ್ಚ ಲಕ್ಷಣಾಲಕ್ಷಣೈಃ ಸಮಾಃ ॥೧೨೫॥
ಮಾನುಷಾ ಮಧ್ಯಮಾಃ ಸದ್ಯುಗ್ದುರ್ಲಕ್ಷಣಯುತಃ ಕಲಿಃ

ತನಗಿಂತ ಉತ್ತಮರೆಲ್ಲರೂ ಕ್ರಮದಿಂದ ಗುರುಗಳೆಂದೇ ಹೇಳಲ್ಪಡುತ್ತಾರೆ. ಮನುಷ್ಯೋತ್ತಮರಿಗೆ ಕ್ರಮದಿಂದ ಎಲ್ಲ ಲಕ್ಷಣಗಳೂ ಇಲ್ಲದಿದ್ದ ರೂ ನಮಗಿಂತ ದೊಡ್ಡವರಾದ ಕಾರಣ ಅವರೂ ಗುರುಗಳೇ. ಮಧ್ಯಮ ಮನುಷ್ಯರು ಲಕ್ಷಣ ಹಾಗೂ ಅವಲಕ್ಷಣ ಎರಡೂ ಸಮಾನವಾಗಿ ಉಳ್ಳವರಾಗಿರುತ್ತಾರೆ. ಆದರೆ ಕಲಿಯು ಎಲ್ಲ ದುರ್ಲಕ್ಷಣಗಳನ್ನೂ ಹೊಂದಿದವನಾಗಿರುತ್ತಾನೆ.

ಸಮ್ಯಗ್ಲಕ್ಷಣಸಂಪನ್ನೋ ಯದ್ದ ದ್ಯಾತ್ಸುಪ್ರಸನ್ನ ಧೀಃ ॥೧೨೬॥
ಶಿಷ್ಯಾಯ ಸತ್ಯಂ ಭವತಿ ತತ್ಸರ್ವಂ ನಾತ್ರ ಸಂಶಯಃ ।
ಅಗಮ್ಯತ್ವಾದ್ಧ ರಿಸ್ತಸ್ಮಿನ್ವಿಷ್ಟೋ ಮುಕ್ತಿದೋ ಭವೇತ್ ॥೧೨೭॥

ಉತ್ತಮ ಲಕ್ಷಣಗಳಿಂದ ಕೂಡಿದ ಗುರುಗಳು ಚೆನ್ನಾಗಿ ಪ್ರಸನ್ನವಾದ ಬುದ್ಧಿಯುಳ್ಳವರಾಗಿ, ಶಿಷ್ಯನಿಗೋಸ್ಕರ ಯಾವ ವರವನ್ನು ನೀಡುವರೋ ಅದು ಸತ್ಯವಾಗಿಯೇ ಬಿಡುತ್ತದೆ, ಇದರಲ್ಲಿ ಯಾವ ಸಂಶಯವೂ ಇಲ್ಲ. ಭಗವಂತನನ್ನು ಹೊಂದಲಿಕ್ಕೆ ಸಾಮಾನ್ಯರಿಗೆ ಶಕ್ಯವಿಲ್ಲ. ಆದ್ದರಿಂದಲೇ ಶ್ರೀಹರಿಯು ಗುರುಗಳಲ್ಲಿ ನೆಲೆಸಿದ್ದು ಪುರುಷಾರ್ಥಗಳನ್ನು ಕರುಣಿಸುವವನಾಗಿ ಮುಕ್ತಿಯನ್ನೂ ನೀಡುವನು.

ನ ತತ್ಸತ್ಯಂ ಭವೇತ್ತಸ್ಮಾದರ್ಚನೀಯೋ ಗುರುಃ ಸದಾ ॥೧೨೮॥

ಗುರುಗಳು ಪ್ರಸನ್ನರಾಗದೆ ಯಾವ ವರವನ್ನು ನೀಡಿದರೂ ಅದು ಫಲಿಸಲಾರದು, ಸತ್ಯವಾಗಲಾರದು. ಆದ್ದರಿಂದ ನಾವು ವಿಶೇಷವಾದ ಭಕ್ತಿಯಿಂದ ಗುರುಗಳನ್ನು ಅರ್ಚಿಸಿ ಅವರನ್ನು ಪ್ರಸನ್ನೀಕರಿಸಬೇಕು. ಸದಾ ಸರ್ವಕಾಲವೂ ಗುರುಗಳನ್ನು ಸೇವಿಸಬೇಕು.

ಸ್ವಾವರಾಣಾಂ ಗುರುತ್ವಂ ತು ಭವೇತ್ಕಾರಣತಃ ಕ್ವಚಿತ್ ।
ಮರ್ಯಾದಾರ್ಥಂ ತೇಪಿ ಪೂಜ್ಯಾ ನ ತು ಯದ್ವತ್ಪರೋ ಗುರುಃ ॥೧೨೯॥

ತಮಗಿಂತ ಚಿಕ್ಕವರೂ ಕೂಡ ಕಾರಣಾಂತರಗಳಿಂದ ಕೆಲವೊಮ್ಮೆ ಗುರುಗಳಾಗುವ ಸನ್ನಿವೇಶ ಬರಬಹುದು. ಆಗ ಅವರೂ ಪೂಜ್ಯರೇ ಆಗಿರುತ್ತಾರೆ.ಮರ್ಯಾದೆಗಾಗಿ (ನಿಯಮಪಾಲನೆಗಾಗಿ) ಅವರನ್ನೂ ಪೂಜಿಸಬೇಕು. ಆದರೆ ನಮಗಿಂತ ಉತ್ತಮ ಗುರುಗಳು ಎಷ್ಟು ಪೂಜ್ಯರೋ ಅಷ್ಟು ಪೂಜ್ಯರು ಇವರಲ್ಲ. ಯಥಾಯೋಗ್ಯ ಪೂಜ್ಯರು.

ಇತ್ಯೇತತ್ಪಂಚರಾತ್ರೋಕ್ತಂ ಪುರಾಣೇಷ್ವ ನುಮೋದಿತಮ್ ।
ಯದಾಮುಕ್ತಿಪ್ರದಾನಾಯ ಸ್ವಯೋಗ್ಯಂ ಪಶ್ಯತಿ ಧ್ರುವಮ್ ॥೧೩೦॥
ರೂಪಂ ಹರೇಸ್ತದಾ ತಸ್ಯ ಸರ್ವಪಾಪಾನಿ ಭಸ್ಮಸಾತ್ ।
ಯಾಂತಿ ಪೂರ್ವಾಣ್ಯುತ್ತರಾಣಿ ನ ಶ್ಲೇಷಂ ಯಾಂತಿ ಕಾನಿ ಚಿತ್ ॥೧೩೧॥

ಈ ರೀತಿಯಾಗಿ (ಗುರುಗಳ ಬಗ್ಗೆ) ವಿಷಯಗಳನ್ನು ಪಂಚರಾತ್ರದಲ್ಲಿ ಹೇಳಿದ್ದಾರೆ. ಇದೇ ವಿಷಯವನ್ನು ಇತರ ಎಲ್ಲ ಪುರಾಣಗಳೂ ಅಂಗೀಕರಿಸಿವೆ. ಯಾವಾಗ ಮುಕ್ತಿಯನ್ನು ನೀಡುವ ತನ್ನ ಬಿಂಬರೂಪವಾದ ಶ್ರೀಹರಿಯನ್ನು ಚೆನ್ನಾಗಿ ಹೃದಯದಲ್ಲಿ ನೋಡುತ್ತಾನ್ನೋ ಆಗ ಸಕಲ ಪಾಪಗಳೂ ಭಸ್ಮವಾಗಿ ಹೋಗುತ್ತವೆ. ಮುಂದೆ ಏನಾದರೂ ಪಾಪ ಮಾಡಿದರೂ ಅವರಿಗೆ ಲೇಪವಾಗುವುದಿಲ್ಲ.

ಮೋಕ್ಷಶ್ಚ ನಿಯಮಸ್ತಸ್ಮಾತ್ಸ್ವಯೋಗ್ಯ ಹರಿದರ್ಶನೇ ।
ಭವಿಷ್ಯತ್ಪರ್ವವಚನಮಿತ್ಯೇತತ್ಸೂತ್ರಗಂ ತಥಾ ॥೧೩೨॥

ತನ್ನ ದರ್ಶನಕ್ಕೆ ಯೋಗ್ಯವಾದ (ಬಿಂಬಮೂರ್ತಿಯಾದ) ಶ್ರೀಹರಿಯ ರೂಪವನ್ನು ನೋಡಿದರೆ ನಿಶ್ಚಯವಾಗಿಯೂ ಆತನಿಂದ ಮುಕ್ತಿಯನ್ನು ಹೊಂದಬಹುದು. ಈ ರೀತಿಯಾಗಿ ಭವಿಷ್ಯತ್ಪರ್ವ ವಚನವಿದೆ. ಮತ್ತೂ " ಓಂ ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್ ಓಂ"
ಎನ್ನುವ ಸೂತ್ರದಲ್ಲಿಯೂ ಈ ಪ್ರಮೇಯವನ್ನು ಹೇಳಿದ್ದಾರೆ.

ಶ್ರುತಿಶ್ಚ ತತ್ಪರಾತದ್ವಥೇತ್ಯವದತ್ಸ್ಫುಟಮ್ ।
ಮುಕ್ತಾಸ್ತು ಮಾನುಷಾ ದೇವಾನ್ದೇವಾ ಇಂದ್ರಂ ಸ ಶಂಕರಮ್ ॥೧೩೩॥
ಸ ಬ್ರಹ್ಮಾಣಂ ಕ್ರಮೇಣೈವ ತೇನ ಯಾಂತ್ಯಖಿಲಾ ಹರಿಮ್ ।
ಉತ್ತರೋತ್ತರ ವಶ್ಯಾಶ್ಚ ಮುಕ್ತಾರುದ್ರಪುರಸ್ಸರಾಃ ॥೧೩೪॥

ಮತ್ತು "ತದ್ಯಥಾ" ಎಂದು ಪ್ರಾರಂಭವಾಗುವ ಶ್ರುತಿಯೂ ಕೂಡ ಅಪರೋಕ್ಷ ಜ್ಞಾನಿಗಳ ಹಿಂದಿನ ಪಾಪಗಳು ನಾಸವಾಗುತ್ತವೆ: ಮುಂದೇನಾದರೂ ಪಾಪ ಮಾಡಿದರೂ ಅಂಟುವುದಿಲ್ಲ; ಎಂಬ ಪ್ರಮೇಯವನ್ನು ಸ್ಪಷ್ಟವಾಗಿ ತಿಳಿಸುತ್ತದೆ.
ಮುಕ್ತರಾದ ಮನುಷ್ಯರು ದೇವತೆಗಳನ್ನು ಹೊಂದುತ್ತಾರೆ. ದೇವತೆಗಳು ಇಂದ್ರನನ್ನು ಹೊಂದುತ್ತಾರೆ. ಇಂದ್ರನು ಶಂಕರನನ್ನು ಹೊಂದುತ್ತಾನೆ. ಶಂಕರನು ಬ್ರಹ್ಮದೇವರನ್ನು ಹೊಂದುತ್ತಾನೆ. ಬ್ರಹ್ಮದೇವರು ಪರಮಾತ್ಮನನ್ನು ಹೊಂದುತ್ತಾರೆ. ಆಗ ಎಲ್ಲರೂ ಬ್ರಹ್ಮದೇವರಿಂದ ಕೂಡಿಕೊಂಡು ತಾವೂ ಪರಮಾತ್ಮನನ್ನು ಹೊಂದುತ್ತಾರೆ. ಆ ಮೋಕ್ಷದಲ್ಲಿ ಶೇಷದೇವರೇ ಮೊದಲಾದ ಮುಕ್ತರು ತಮಗಿಂತ ಉತ್ತಮರ ಅಧೀನದಲ್ಲಿ ಇರುತ್ತಾರೆ.

ನಿರ್ದೋಷಾಃ ನಿತ್ಯಸುಖಿನಃ ಪುನರಾವೃತ್ತಿವರ್ಜಿತಾಃ ।
ಸ್ವೇಚ್ಛಯೈವ ರಮಂತೇತ್ರ ನಾನಿಷ್ಟಂ ತೇಷು ಕಿಂಚನ ॥೧೩೫॥

ದೋಷರಹಿತರೂ, ಭಗವದ್ಭಕ್ತರೂ, ಪುನರಾವೃತ್ತಿರಹಿತರೂ (ಪುನಃ ಸಂಸಾರಕ್ಕೆ ತಿರುಗಿ ಬಾರದವರೂ) ಆಗಿರುವ ಮುಕ್ತರಾದ ಭಗವದ್ಭಕ್ತರು ತಮ್ಮ ಇಚ್ಛೆಯಿಂದಲೇ ಕ್ರೀಡಿಸುತ್ತಿದ್ದಾರೆ. ಅವರಿಗೆ ಸ್ವಲ್ಪವೂ ಅಲ್ಲಿ ಅನಿಷ್ಟವಿಲ್ಲ (ದುಃಖವಿಲ್ಲ).

ಅಸುರಾಃ ಕಲಿಪರ್ಯಂತಾ ಏವಂ ದುಃಖೋತ್ತರೋತ್ತರಾಃ ।
ಕಲಿರ್ದುಃಖಾಧಿಕಸ್ತೇಷುತೇಪ್ಯೇವಂ ಬ್ರಹ್ಮವದ್ಗಣಾಃ ॥೧೩೬॥

ಮನುಷ್ಯಾಧಮರನ್ನು ಆರಂಭಿಸಿ ಕಲಿಪರ್ಯಂತ ಎಲ್ಲ ಅಸುರರೂ ಒಬ್ಬರಿಗಿಂತ ಒಬ್ಬರು ಹೆಚ್ಚೆಚ್ಚಾಗಿ ದುಃಖವನ್ನು ಅನುಭವಿಸುವವರು. ಅವರಲ್ಲಿ ಕಲಿಯೇ ಎಲ್ಲರಿಗಿಂತಲೂ ಹೆಚ್ಚು ದುಃಖವನ್ನು ಅನುಭವಿಸುವವನು. ಈಗಿನ ಕಲಿಯು ಅಂಧಂತಮಸ್ಸನ್ನು ಹೊಂದಿದ ಮೇಲೆ ನಂತರ ಮತ್ತೊಬ್ಬ ಕಲಿಯ ಪದವಿಗೆ ಬರುತ್ತಾನೆ. ಬ್ರಹ್ಮಪದವಿಗೆ ಯೋಗ್ಯರಾದ ಋಜುಗಣದವರು ಇರುವಂತೆ, ಕಲಿಪದವಿಗೆ ಯೋಗ್ಯರಾದ ಒಂದು ಗಣದವರು ಇದ್ದಾರೆ.

ತಥಾನ್ಯೇಪ್ಯಸುರಾಃ ಸರ್ವೇ ಗಣಾ ಯೋಗ್ಯತಯಾ ಸದಾ ।
ಬ್ರಹ್ಮೈವ ಸರ್ವಜೀವೇಭ್ಯಃ ಸದಾ ಸರ್ವಗುಣಾಧಿಕಃ ॥೧೩೭॥
ಮುಕ್ತೋಪಿ ಸರ್ವಮುಕ್ತಾನಾಂ ಆಧಿಪತ್ಯೇ ಸ್ಥಿತಃ ಸದಾ ।
ಆಶ್ರಯಸ್ತಸ್ಯ ಭಗವಾನ್ ಸದಾ ನಾರಾಯಣ ಪ್ರಭುಃ ॥೧೩೮॥

ರುದ್ರಾದಿ ಪದವಿಗಳಿಗೆ ಯೋಗ್ಯರಾದ ಗಣದವರು ಇರುವಂತೆಯೇ, ದ್ವಾಪರ ಮೊದಲಾದ ಪದವಿಗಳಿಗೆ ಯೋಗ್ಯರಾದ ಅಸುರರ ಗಣದವರೂ ಇರುವರು.
ಸಕಲ ಜೀವರಿಗಿಂತಲೂ ಬ್ರಹ್ಮದೇವರೇ ಸಕಲ ಗುಣಗಳಿಂದಲೂ ಅಧಿಕರು. ಬ್ರಹ್ಮದೇವರು ಮುಕ್ತರಾದರೂ, ಇತರ ಎಲ್ಲ ಮುಕ್ತರಿಗೂ ಇವರೇ ಅಧಿಪತಿಗಳಾಗಿರುವರು. ಈ ಬ್ರಹ್ಮದೇವರಿಗೆ ಪೂಜ್ಯನೂ, ಸರ್ವಸಮರ್ಥನೂ ಆಗಿರುವ ನಾರಾಯಣನೇ ಸದಾ ಸರ್ವಕಾಲವೂ ಆಶ್ರಯನಾಗಿರುವನು.

ಇತ್ಯೃಗ್ಯಜುಃಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥೧೩೯॥
ವಿಷ್ಣ್ವಾಜ್ಞಯೈವ ವಿದುಷಾ ತತ್ಪ್ರಸಾದ ಬಲೋನ್ನತೇಃ ।

ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥೧೪೦॥

ಹೀಗೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೆದ, ಪಂಚರಾತ್ರಾಗಮ, ಇತಿಹಾಸ, ಪುರಾಣಗಳಿಂದಲೂ ಹಾಗೂ ಇತರ ಎಲ್ಲ ಶಾಸ್ತ್ರಗಳಿಂದಲೂ ಮೇಲೆ ಹೇಳಿದ ಎಲ್ಲ ವಿಷಯಗಳು ನಿರ್ಣಯ ಮಾದಲ್ಪಟ್ಟಿವೆ. ಜ್ಞಾನಿಗಳಾದ, ಪೂರ್ಣಪ್ರಜ್ಞರೆಂಬ ಹೆಸರುಳ್ಳ ಆನಂದತೀರ್ಥಮುನಿಗಳಿಂದ, ಶ್ರೀ ವಿಷ್ಣುವಿನ ಆಜ್ಞೆಯಿಂದಲೇ ಆತನ ಉತ್ತಮ ಅನುಗ್ರಹಬಲದಿಂದ ಈ ನಿರ್ಣಯವು ಮಾಡಲ್ಪಟ್ಟಿದೆ.

ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ಯೋಸೌ ॥

ದೊಡ್ಡ ಬದರಿಯಲ್ಲಿ ನೆಲೆಸಿರುವ ವೇದವ್ಯಾಸರೂಪಿಯಾದ ಶ್ರೀ ವಿಷ್ಣುವಿನ ಆಜ್ಞೆಯಿಂದಲೇ ಸಕಲ ಶಾಸ್ತ್ರಗಳ ಉತ್ತಮ ತಾತ್ಪರ್ಯವು ಶ್ರೀ ವಿಷ್ಣುವಿನಿಂದ ಹೇಳಲ್ಪಟ್ಟದೆ. ಈ ತಾತ್ಪರ್ಯವನ್ನು ತಿಳಿದುಕೊಂಡರೇನೇ ಮುಕ್ತಿಯನ್ನು ಹೊಂದಬಹುದು.

ಇತಿ ಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀ ಮನ್ಮಹಾಭಾರತತಾತ್ಪರ್ಯ ನಿರ್ಣಯೇ
ಸರ್ವಶಾಸ್ತ್ರಾರ್ಥ ನಿರ್ಣಯೇ ನಾಮ ಪ್ರಥಮೋಧ್ಯಾಯಃ